ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 12 ಸಂ. 8 | ಆಗಸ್ಟ್ 2015 | ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಫೆಬ್ರವರಿ 2009ರ ಸಂಚಿಕೆ)

26–02–2009ರ ಗುರುವಾರದಂದು ಬೆಂಗಳೂರಿನಲ್ಲಿ ನಾವು ಬೆಳಕನ್ನು ಚಾನಲ್ ಮಾಡುವ ಬೃಹತ್ ಘಟನೆಯೊಂದನ್ನು ಆಯೋಜಿಸುತ್ತಿದ್ದೇವೆ. ಆ ದಿನ ಅಲ್ಲಿ ಸೇರಿದ ಜನರು ಮಾತ್ರವಲ್ಲದೆ ಇಡೀ ಜಗತ್ತಿನ ಜನರು ಅದೇ ವೇಳೆಯಲ್ಲಿ ಬೆಳಕನ್ನು ಚಾನಲ್ ಮಾಡಬೇಕೆಂದು ನಾವು ವಿನಂತಿಸಿಕೊಳ್ಳುತ್ತೇವೆ. ನಮ್ಮ ಸಂಕಲ್ಪವು ದೊಡ್ಡದಾದರೂ ಅದಕ್ಕೆ ಬೇಕಾದ ಸಂಪನ್ಮೂಲಗಳು ಸೀಮಿತವಾಗಿವೆ. ಇರುವ ಸಂಪನ್ಮೂಲಗಳಿಂದಲೇ ನಾವು ಈ ಘಟನೆಯನ್ನು ಎಲ್ಲಾ ಸಾಧ್ಯವಾದ ವಿಧಾನಗಳಿಂದ, ಅಂದರೆ, ವೃತ್ತ ಪತ್ರಿಕೆ, TV ಚಾನಲ್‌ಗಳು, SMS, ಇ–ಮೇಲ್ ಮುಂತಾದವುಗಳ ಮೂಲಕ ಪ್ರಚಾರ ಮಾಡೋಣ. ಸಂಜೆ 7.30ರಿಂದ ಏಳು ನಿಮಿಷಗಳವರೆಗೆ ಲಕ್ಷಾಂತರ ಜನರು ನಮ್ಮೊಂದಿಗೆ ಬೆಳಕನ್ನು ಚಾನಲ್ ಮಾಡುವಂತೆ ಎಲ್ಲರೂ ಈ ವಿಷಯವನ್ನು ಹರಡಬೇಕೆಂದು ನಾವು ವಿನಂತಿಸಿಕೊಳ್ಳುತ್ತೇವೆ. ಈ ವಿಷಯವು ಆದಷ್ಟು ಹೆಚ್ಚಿನ ಜನರಿಗೆ ತಲುಪಲಿ.

ಬೆಳಕು ಎಂದರೇನು? ಬೆಳಕು ಒಂದು ಶಕ್ತಿ. ಅದು ಸೃಜನಶೀಲ ಬುದ್ಧಿಶಕ್ತಿ. ಅದು ಇಡೀ ಸೃಷ್ಟಿಗೆ ಮೂಲ.

ಬೆಳಕನ್ನು ಚಾನಲ್ ಮಾಡುವ ಉದ್ದೇಶವೇನು? ಹೀಲ್ ಮಾಡಲು, ಮುಂಬಯಿಯನ್ನು ಹೀಲ್ ಮಾಡಲು, ಗಾಜಾವನ್ನು ಹೀಲ್ ಮಾಡಲು, ಹಿಂಸೆ ಮತ್ತು ದ್ವೇಷದಿಂದಾದ ಯಾವುದೇ ಗಾಯವನ್ನು ಹೀಲ್ ಮಾಡಲು. ವ್ಯಕ್ತಿಯನ್ನು ಹೀಲ್ ಮಾಡಲು, ದೇಶವನ್ನು ಹೀಲ್ ಮಾಡಲು, ಪ್ರಪಂಚವನ್ನು ಹೀಲ್ ಮಾಡಲು. ನಾವು ಬೆಳಕನ್ನು ಚಾನಲ್ ಮಾಡುವುದು ಶಾಂತಿಯನ್ನುಂಟು ಮಾಡಲು, ನವಯುಗಕ್ಕಾಗಿ ನವ ಚೈತನ್ಯಗಳನ್ನು ತರಲು, ಪುನರುತ್ಥಾನಕ್ಕಾಗಿ, ಪರಿವರ್ತನೆಗಾಗಿ ಹಾಗೂ ಮಾನವಕೃತ ವಿನಾಶಗಳಿಂದ ಈ ಪೃಥ್ವಿಯನ್ನು ರಕ್ಷಿಸುವುದಕ್ಕಾಗಿ.

ಬೆಳಕು ಹೇಗೆ ಕೆಲಸ ಮಾಡುತ್ತದೆ? ನೇರವಾಗಿಯಲ್ಲ. ನಾವು ಬೆಳಕನ್ನು ಚಾನಲ್ ಮಾಡಿದ ಮರುದಿನ ಯುದ್ಧಗಳು ನಿಲ್ಲುವುದಿಲ್ಲ. ಬದಲಾವಣೆಗಳು ಹಠಾತ್ತಾಗಿ ಆಗುವುದಿಲ್ಲ. ಪವಾಡಗಳು ಜರುಗುವುದಿಲ್ಲ. ಬೆಳಕು ತನ್ನದೇ ರೀತಿಯಲ್ಲಿ ಕೆಲಸ ಮಾಡುತ್ತದೆ ಹಾಗೂ ಬದಲಾವಣೆಗಳು ಕಂಡುಬರುತ್ತವೆ, ಪ್ರಯೋಜನಗಳಿರುತ್ತವೆ.

ಬೆಳಕು ಇರುವುದೇ ಆದರೆ, ಅದಕ್ಕೆ ಬುದ್ಧಿಶಕ್ತಿ ಇರುವುದೇ ಆದರೆ, ಅದು ಚಾನಲ್ ಮಾಡಲ್ಪಡದೆ ಏಕೆ ಕೆಲಸ ಮಾಡುವುದಿಲ್ಲ? ನಾವು ಕೋರಿಕೆಯನ್ನಿಡಬೇಕು, ನಾವು ಚಾನಲ್ ಮಾಡಬೇಕು ಎನ್ನುವುದು ಅಧ್ಯಾತ್ಮದ ನಿಯಮ. ಹೆಚ್ಚಿನ ಜನರು ಚಾನಲ್ ಮಾಡಿದಷ್ಟೂ ಪರಿಣಾಮ ಹೆಚ್ಚಿರುತ್ತದೆ. ಹೆಚ್ಚಿನ ಜನರು ಏಕ ಕಾಲಕ್ಕೆ ಚಾನಲ್ ಮಾಡಿದರೆ ಪರಿಣಾಮ ಶೀಘ್ರವಾಗಿ ದೊರೆಯುತ್ತದೆ.

ಈ ಘಟನೆಯು ಅದ್ವಿತೀಯವಾಗಿರುತ್ತದೆ. ಅಲ್ಲಿ ಯಾವುದೇ ಧರ್ಮೋಪದೇಶವಿರುವುದಿಲ್ಲ, ಯಾವುದೇ ಬೋಧನೆಗಳಿರುವುದಿಲ್ಲ, ಸದಸ್ಯತ್ವದ ಹೆಚ್ಚಳಕ್ಕಾಗಿ ಯಾವುದೇ ಪ್ರಯತ್ನಗಳಿರುವುದಿಲ್ಲ. ಈ ಘಟನೆಯು ಉತ್ತಮ ಜೀವನ ಹಾಗೂ ಉತ್ತಮ ಭವಿಷ್ಯ ರೂಪಿಸಲು ಒಂದು ಅಪೂರ್ವ ಅವಕಾಶ. ಈ ಮೂರು ದಶಕಗಳಲ್ಲೇ ಇದು ಅತ್ಯಂತ ಪ್ರಮುಖ ಘಟನೆಯಾಗಲಿದೆ.

ಇದು ವಿಶ್ವ ಬೆಳಕಿನ ಸಂಚಲನದ ಒಂದು ಭಾಗ.

18–05–1981ರಂದು ಅಮರರವರು ಮನೋವತಿಯಲ್ಲಿರುವ ತಮ್ಮ ಮನೆಯ ಬೀಗದ ಕೈಯನ್ನು ಕೊಡುತ್ತ, "ಇದೇನೆಂದು ನಿಮಗೆ ಗೊತ್ತೆ?" ಎಂದು ಕೇಳಿದರು. ನನಗೆ ಗೊತ್ತಿತ್ತು.

ಅದು ಬೀಗದ ಕೈ ಮಾತ್ರವಾಗಿರಲಿಲ್ಲ, ಅದೊಂದು ಹೊಣೆಗಾರಿಕೆಯಾಗಿತ್ತು. ಒಂದು ಅವಕಾಶ ಹಾಗೂ ಉತ್ತರಾಧಿಕಾರ. ಆಗ, ನನಗೆ ಅರ್ಥವಾಗದ ಹಲವಾರು ವಸ್ತುಗಳನ್ನು ಅಮರರವರು ನನಗೆ ಕೊಟ್ಟಿದ್ದಾರೆ. ಅಮರರವರು ಬೆಳಕು ಮತ್ತು ಪ್ರೀತಿಯನ್ನು ನನ್ನತ್ತ ಹರಿಸಿದರು ಎಂದು ಈಗ ಅರ್ಥವಾಗುತ್ತಿದೆ. ನಾನೀಗ ಅವರ ಬೆಳಕು, ಪ್ರೀತಿ ಮತ್ತು ಅನುಗ್ರಹದೊಂದಿಗೆ ಕೆಲಸ ಮಾಡುತ್ತಿದ್ದೇನೆ.

ನಾವು ನಮ್ಮ ಗುರುವಿನೊಡನೆ ಸಂಪರ್ಕದಲ್ಲಿದ್ದಾಗ ಕಾಲ, ದೇಶಗಳು ಅದೃಶ್ಯವಾಗುತ್ತವೆ. ಆದ್ದರಿಂದಲೇ ನನಗೆ ಅಮರರವರ ಅನುಪಸ್ಥಿತಿಯ ಅನುಭವವಾಗುವುದಿಲ್ಲ. ಅವರು ಸದಾ ಇಲ್ಲಿಯೇ ಇದ್ದಾರೆ, ಹತ್ತಿರದಲ್ಲೇ ಇದ್ದಾರೆ. ನಿಜವಾದ ಸಂಬಂಧಗಳು ಶಾಶ್ವತವಾಗಿರುತ್ತವೆ. ಹುಸಿಯಾದವು ಸೊರಗಿಹೋಗುತ್ತವೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫ್ಲೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)


**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಈ ವರ್ಷದ ಮೂರನೆಯ ತ್ರೈಮಾಸಿಕ ಲೈಟ್ ಚಾನಲ್ಸ್ ಮೀಟಿಂಗ್‌ಅನ್ನು ಜುಲೈ 12ರಂದು ನಡೆಸಲಾಯಿತು.

### ಸುದ್ದಿ-ಸೂಚನೆ

- 30-8-2015 ರಂದು ತಪೋನಗರದಲ್ಲಿ ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 28-8-2015 ರೊಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- ಶಂಬಲದ ವಿಶೇಷ ಚೈತನ್ಯಗಳನ್ನು ಪಡೆಯಲು, ಶಂಬಲ ಗ್ರೂಪ್‌ನ ಧ್ಯಾನಿಗಳು 12-07-2015 ರಂದು ಸೇರಿದ್ದರು.
- 'ರಾ' ಲೋಕದ ವಿಶೇಷ ಚೈತನ್ಯಗಳನ್ನು ಪಡೆಯಲು, ರಾ ಗ್ರೂಪ್‌ನ ಧ್ಯಾನಿಗಳು 19-07-2015ರಂದು ಸೇರಿದ್ದರು.
- 01-6-2015 ರಿಂದ ದೂರಕಲಿಕೆಯ ರಿಜಿಸ್ಟ್ರೇಶನ್ ಫೀಯನ್ನು ಪರಿಷ್ಕರಿಸಲಾಗಿದೆ. ಇದರ ವಿವರಕ್ಕಾಗಿ ಪುಟ 6ನ್ನು ನೋಡಬೇಕಾಗಿ ವಿನಂತಿ.

**ಜುಲೈ 16ಕ್ಕೆ ಆರಂಭವಾಗುವ ಆಷಾಢಮಾಸದಲ್ಲಿ ನಾವು ಅದ್ಭುತವಾದ ಮತ್ತು ಮಹತ್ತರವಾದ ಚೈತನ್ಯಗಳನ್ನು ಪರಬ್ರಹ್ಮಲೋಕದಿಂದ ನೇರವಾಗಿ ಪಡೆಯುತ್ತೇವೆ. ಅದು ಗುರುಪೂರ್ಣಿಮೆಯ ದಿನವಾದ 31-7-2015ರಂದು ಅತೀ ಹೆಚ್ಚಾಗಿದೆ. ಆ ದಿನ ನಾವು ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಧ್ಯಾನಮಾಡಬೇಕು. ಆ ದಿನ ರಾತ್ರಿ ಮಲಗುವ ಮುನ್ನ, ಮೇಲಿನಿಂದ ಬೆಳಕು ಬಂದು ನಮ್ಮ ಸಂಪೂರ್ಣ ಶರೀರವನ್ನು ತುಂಬುತ್ತಿದೆ ಎಂದು ಊಹಿಸಿಕೊಳ್ಳಿ. ಇದನ್ನು 7 ನಿಮಿಷಗಳಕಾಲ ಅಭ್ಯಾಸ ಮಾಡಬಹುದು. ಇಡೀ ರಾತ್ರಿ, ನಾವು ಚೈತನ್ಯಗಳನ್ನು ಪಡೆಯುತ್ತಿರುತ್ತೇವೆ.**

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 07 | ಶುಕ್ರ | ಕೃಷ್ಣ ಅಷ್ಟಮಿ |
| 12 | ಬುಧ | ಮಾಸ ಶಿವರಾತ್ರಿ |
| 14 | ಶುಕ್ರ | ಅಮಾವಾಸ್ಯೆ |
| 23 | ಭಾನು | ಶುಕ್ಲ ಅಷ್ಟಮಿ |
| 25 | ಮಂಗಳ | ಶುಕ್ಲ ದಶಮಿ ಅಮರರವರ ಮಹಾಸಮಾಧಿ ದಿನ |
| 28 | ಶುಕ್ರ | ಮಹಾಲಕ್ಷ್ಮಿ ಪೂಜೆ |
| 29 | ಶನಿ | ಪೂರ್ಣಿಮಾ |
| 30 | ಭಾನು | ಅಮರರವರ ಮಹಾಸಮಾಧಿ ಕಾರ್ಯಕ್ರಮ |

### ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು:ಉಪನ್ಯಾಸಗಳು: ಬೆಳಿಗ್ಗೆ 11-12
ಲೈಟ್ ಚಾನಲಿಂಗ್: ಮಧ್ಯಾಹ್ನ12-1
30-08-15 ಅಮರರವರ ಮಹಾಸಮಾಧಿ ಕಾರ್ಯಕ್ರಮ

### ಅಮರರವರ ಮಹಾಸಮಾಧಿ ಕಾರ್ಯಕ್ರಮ ಭಾನುವಾರ, 30-8-2014

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ |
| | ಭಾಷಣಗಳು |
| | ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಆನೇಕಲ್ ಕಾರ್ಯಕ್ರಮ

ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ದಿನಾಂಕ 25-8-2015 ರಂದು ಬೆಳಿಗ್ಗೆ 11.30 ಘಂಟೆಗೆ ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಭಾನುವಾರದ ಉಪನ್ಯಾಸಗಳ DVDಗಳು ಸದಸ್ಯರುಗಳಿಗೆ ಲಭ್ಯವಿವೆ. ವಿವರಗಳಿಗಾಗಿ ಮಾನಸ ಆಫೀಸನ್ನು ದಯವಿಟ್ಟು ಸಂಪರ್ಕಿಸಿ.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಗುರೂಜಿಯವರ ಹುಟ್ಟುಹಬ್ಬದ ದಿನವಾದ 18–05–2015ರಂದು, ನನ್ನ ಆಂಟಿ ಮತ್ತು ಅಂಕಲ್ ಅವರ ಮನೆಯಲ್ಲಿ ಲೈಟ್ ಚಾನಲ್ ಮಾಡುವಂತೆ ಕೇಳಿಕೊಂಡರು. ನಾನು ಗುರೂಜಿಯವರ ಮತ್ತು ಅಮರರವರ ಫೋಟೋಗಳ ಮುಂದೆ ನಿಂತು ಅವರನ್ನು ಪ್ರಾರ್ಥಿಸಿದೆ. ಆಗ ಮನೆಯಿಡೀ ಪ್ರಕಾಶಮಾನವಾದ ಬಿಳಿಬಣ್ಣದ ಬೆಳಕಿನಿಂದ ತುಂಬಿ, ಅದು ನನ್ನನ್ನೂ ಕೂಡಾ ಪ್ರವೇಶಿಸಿತು. 'ನಿಮ್ಮ ಇರುವಿಕೆಯನ್ನು ನನ್ನ ಅನುಭವಕ್ಕೆ ತನ್ನಿ' ಎಂದು ನಾನು ಕೇಳಿಕೊಂಡೆ. ಆಗ, ಗುರೂಜಿಯವರು ನನ್ನ ಕೈಯನ್ನು ಸ್ಪರ್ಶಿಸಿದರು. ಗುರೂಜಿಯವರಿಂದ ಬೆಳಕು ಬಂದು, ನನ್ನನ್ನು ಪ್ರವೇಶಿಸಿತು ಮತ್ತು ನಾನು ಬೆಳಕಾಗಿ ಪರಿವರ್ತನೆಗೊಂಡೆ. ನನಗಾಗ ನನ್ನ ಶರೀರದ ಅಸ್ತಿತ್ವ ಇಲ್ಲದಂತಾಯಿತು. ಅದೊಂದು ರೋಮಾಂಚಕಾರಿ ಅನುಭವ ಮತ್ತು ನನಗೆ ಅದರಿಂದ ಹೊರಬರಬೇಕೆಂದು ಅನಿಸಲೇ ಇಲ್ಲ.

– ಅನೀಶಾ ಪತಿ, ಲೈಟ್ ಚಾನಲ್

ಶ್ರೀಮತಿ ಕುಲಕರ್ಣಿಯವರು ಲೈಟ್ ಚಾನಲಿಂಗ್ ಬಗ್ಗೆ ಮಾತನಾಡುತ್ತಿದ್ದಾಗ, ನನಗೆ ಅದರ ಪರಿಣಾಮದ ಬಗ್ಗೆ ಸಂಶಯವಿತ್ತು. ನಂತರ ನಮ್ಮ ವಿದ್ಯಾರ್ಥಿನಿ ಪ್ರಣೀತಾ ಕರ್ವೆ ವ್ಯಕ್ತಪಡಿಸಿದ ತನ್ನ ಅಭಿಪ್ರಾಯವನ್ನು ಕೇಳಿಸಿಕೊಂಡಾಗ ಅದು ಒಂದು ಚಮತ್ಕಾರವೆನಿಸಿತು! ಪ್ರಣೀತಾ ಯಾವಾಗಲೂ ಹೆಚ್ಚಿನ ಒತ್ತಡದಲ್ಲಿರುತ್ತಿದ್ದಳು. ಆಕೆ ಸಂಕೋಚ ಸ್ವಭಾವದವಳಾಗಿದ್ದು, ಆಕೆ ಮಾತನಾಡಲು ವೇದಿಕೆಯ ಮೇಲೆ ಬಂದಾಗ ನನಗೆ ಅತ್ಯಂತ ಸಂತೋಷವಾಯಿತು. ಪ್ರತಿದಿನ ನಾವು ನಮ್ಮ ಕಾಲೇಜಿನಲ್ಲಿ ಲೈಟ್ ಚಾನಲ್ ಮಾಡುವುದಾಗಿ ನಾನು ಶ್ರೀಮತಿ ಕುಲಕರ್ಣಿಯವರಿಗೆ ಆಶ್ವಾಸನೆಯಿತ್ತೆ. ನಾವಾಗಿಯೇ ಲೈಟ್ ಚಾನಲಿಂಗ್ ಮಾಡುವುದಕ್ಕಾಗಿ ನಾವು ಕೆಲವು ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ತರಬೇತುಗೊಳಿಸುತ್ತಿದ್ದೇವೆ.

– ಶ್ರೀಮತಿ ಸ್ವಾತಿ ಎನ್. ಸಾಯಂಕರ್, ಪ್ರಾಂಶುಪಾಲರು, BCA ಕಾಲೇಜ್, ಕುಮಿನ್ಸ್ ಕಾಲೇಜ್ ಕ್ಯಾಂಪಸ್, ಪುಣೆ

ನನಗೀಗ ನನ್ನ ಕೋಪವನ್ನು ಹಿಡಿತದಲ್ಲಿಡಲು ಸಾಧ್ಯವಾಗಿದೆ. ನನ್ನ ಮನಸ್ಸಿನಲ್ಲಿರುವ ಒತ್ತಡವೀಗ ಕಡಿಮೆಯಾಗಿದೆ ಹಾಗೂ ನನ್ನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿದೆ.

– ಶುಭಮ್ ಸುದಮ್ ದಾಮ್ಲೆ, SY, B. Com, ಶಿವ್ರೆ ಪ್ರತಿಷ್ಠಾನ ಕಾಲೇಜ್, ಪುಣೆ

ಲೈಟ್ ಚಾನಲಿಂಗ್ ಮಾಡಿದ ನಂತರ, ನನಗೆ ಸಂತೋಷ ಮತ್ತು ಶಾಂತಿಯ ಅನುಭವವಾಗುತ್ತದೆ. ನನಗೇನಾದರೂ ಬೇಕಾದರೆ, ಅದು ತಾನಾಗಿಯೇ ದೊರಕುತ್ತದೆ. ನನಗೀಗ ದೈವೀ ಚೈತನ್ಯವನ್ನು ಅನುಭವಿಸಲು ಸಾಧ್ಯವಾಗುತ್ತಿದೆ.

– ಸ್ವಪ್ನಿಲ್ ಸಂಜಯ್ ಧಾರಿಯಾ, ವಿದ್ಯಾರ್ಥಿ, ಶಿವ್ರೆ ಪ್ರತಿಷ್ಠಾನ ಕಾಲೇಜ್, ಪುಣೆ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್**

ಒಂದು ಭವ್ಯವಾದ ಮತ್ತು ಪ್ರಶಾಂತವಾದ ಹಳ್ಳಿಯಾಗಿ ಬದಲಾಗುವ ಹಾದಿಯಲ್ಲಿರುವ ಚಿಕ್ಕಗುಬ್ಬಿಯು ಬೆಳೆದಿದೆ. ಮಳೆಗಾಲ ರೈತರಲ್ಲಿ ಇನ್ನೂ ಭರವಸೆಯನ್ನು ತರಬೇಕಿದೆ. ಅವರ ಉಳುಮೆ ಮಾಡಿರುವ ಕಂದುಬಣ್ಣದ ಭೂಮಿಗಳು, ಮೇಲಿನ ಮೋಡಗಳಿಂದ ಮಳೆಯನ್ನು ಬೇಡುತ್ತ ತಮ್ಮ ಹೃದಯಗಳನ್ನು ಇನ್ನೂ ತೆರೆದಿಟ್ಟಿವೆ. ಹತ್ತಿರದಲ್ಲಿರುವ ದೊಡ್ಡಗುಬ್ಬಿ ಕೆರೆ ಮತ್ತು ಸುತ್ತಲಿನ ಸ್ವಚ್ಛಂದ ಹಸಿರು ವಲಯವು ಒರಟು ಭೂಮಿಯ ಮೇಲೆ ಹರಿದಾಡುವ ವಿವಿಧ ಜಾತಿಯ ಕ್ರಿಮಿಕೀಟಗಳನ್ನು ಪೋಷಿಸುತ್ತವೆ ಮತ್ತು ಬಗೆಬಗೆಯ ಪಕ್ಷಿಗಳನ್ನು ಹಾಗೂ ಹಾವುಗಳನ್ನು ಆಕರ್ಷಿಸುತ್ತವೆ. ವೇಗವಾಗಿ ಚಲಿಸುವ ವಾಹನಗಳ ಅಬ್ಬರ ಮತ್ತು ಜನರ ಗದ್ದಲಗಳ ನಡುವೆ, ವರ್ಣರಂಜಿತ ಹಕ್ಕಿಯೊಂದರ ಚಿಲಿಪಿಲಿ ಶಬ್ದ ಅಥವಾ ಸದ್ದಿಲ್ಲದೆ ಸಾಗುವ ವಿಷಪೂರಿತ ಹಾವು ಇಲ್ಲಿನ ದಿನನಿತ್ಯದ ವಾಸ್ತವವಾಗಿದೆ. ತಪೋವನ, ವಿಶ್ವಚೇತನ ಮಂದಿರ ಹಾಗೂ ಕುಂಡಲಿನಿ ಹಾಲ್‌ಗಳ ಘನಗಾಂಭೀರ್ಯತೆ ಮತ್ತು ನಿಶ್ಶಬ್ದ ಇರುವಿಕೆ ಮತ್ತು ಅವು ಹೊರಸೂಸುವ ಪ್ರಶಾಂತತೆ, ಜೊತೆಜೊತೆಯಲ್ಲೇ ಕೊನೆಯಿಲ್ಲದ ಕಟ್ಟಡ ನಿರ್ಮಾಣಕಾರ್ಯ, ಗಾರೆ ಕೆಲಸ ಹಾಗೂ ಹಂಗಾಮಿ ಕೆಲಸಗಾರರ ಗುಡಿಸಲುಗಳ ಬಿಡಾರಗಳು ಕೆಲವರನ್ನು ಅಚ್ಚರಿಗೊಳಿಸಿದರೆ, ಉಳಿದವರನ್ನು ದುಃಖಿತರನ್ನಾಗಿಸುತ್ತದೆ. ಪ್ರತಿಯೊಬ್ಬರೂ ತಪೋನಗರವನ್ನು ತನ್ನದೇ ವಿಶಿಷ್ಟ ದೃಷ್ಟಿಕೋನದಿಂದ ನೋಡುತ್ತಾರೆ. ಈ ದೃಷ್ಟಿಕೋನಗಳನ್ನು ಹಂಚಿಕೊಳ್ಳಲು ಒಂದು ಫೋಟೋಗ್ರಾಫಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಏಪ್ರಿಲ್ ತಿಂಗಳ ನಿವಾಸಿಗಳ ಕೂಟದಲ್ಲಿ ಈ ಸ್ಪರ್ಧೆಯ ಘೋಷಣೆಯನ್ನು ಮಾಡಲಾಯಿತು. ನಿವಾಸಿಗಳು ಗಿಡಮರಗಳು, ಪ್ರಾಣಿಪಕ್ಷಿಗಳು ಮತ್ತು ಸ್ಥಳಗಳೆಂಬ ಪ್ರತಿಯೊಂದು ವಿಭಾಗದಲ್ಲೂ ತಲಾ ಒಂದೊಂದು ಫೋಟೋವನ್ನು ಸಲ್ಲಿಸಬಹುದಾಗಿತ್ತು. ವಯಸ್ಸಿನ ಆಧಾರದ ಮೇಲೆ, ಹಿರಿಯರು ಮತ್ತು ಕಿರಿಯರು ಎಂಬ ಎರಡು ವಿಭಾಗಗಳನ್ನು ನಿರ್ಧರಿಸಲಾಗಿತ್ತು. ತಪೋನಗರ, ಅಂತರ್–ಮಾನಸ ಮತ್ತು ಆನೇಕಲ್ ಎಂಬ ಭೌಗೋಳಿಕ ಮಿತಿಯನ್ನು ನಿರ್ಧರಿಸಲಾಗಿತ್ತು. ವಿಜೇತ ಫೋಟೋಗಳು ಮತ್ತು ಛಾಯಾಚಿತ್ರ ಗ್ರಾಹಕರ ಹೆಸರನ್ನು ಮೇ ತಿಂಗಳ ನಿವಾಸಿಗಳ ಕೂಟದಲ್ಲಿ ಗುರೂಜಿಯವರ ಹುಟ್ಟುಹಬ್ಬದ ಆಚರಣೆಯ ಸಂದರ್ಭದಲ್ಲಿ ಘೋಷಿಸಲಾಯಿತು. ಅನೇಕ ಅಗೋಚರ ಪ್ರತಿಭೆಗಳನ್ನು ಹೊರತಂದ ಈ ಕಾರ್ಯಕ್ರಮವು ಒಂದು ಹೊಸ ಅನುಭವ. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ಜನವರಿ 2005

ಧ್ಯಾನ ಮಾಡುವಾಗ ನಿದ್ರೆಯ ಸ್ಥಿತಿಗೆ ಜಾರದಿರಲು ನಿಮಗೆ ಸಹಾಯ ಮಾಡಬಯಸುತ್ತೇನೆ. ಇದು ಸಹಜವಾದ ತೊಂದರೆ, ಅದನ್ನು ನಾವು ದಾಟಬೇಕು. ತ್ರಾಟಕದ ಬಗ್ಗೆ ಎಚ್ಚರವಹಿಸದೆ ಇರುವ ಕಾರಣದಿಂದಾಗಿಯೇ ಜನರಿಗೆ ಧ್ಯಾನದ ಸಮಯದಲ್ಲಿ ನಿದ್ರೆ ಬರುವಂತಾಗುತ್ತದೆ. ಮನೆಯಲ್ಲಿ ಧ್ಯಾನಕ್ಕೆ ಕುಳಿತಾಗಲೆಲ್ಲಾ ನೀವು ಕರ್ಪೂರವನ್ನು ಉರಿಸಬೇಕು. ಉರಿಯುತ್ತಿರುವ ಜ್ವಾಲೆಯನ್ನು ಅದು ಆರುವವರೆಗೂ ಒಂದೇ ಸಮನೆ ನೋಡಿದ ನಂತರ, ನೀವು ಕೆಲವು ಕ್ಷಣಗಳ ಕಾಲ ನೇರವಾಗಿ ನೋಡಿ ನಂತರ ನಿಮ್ಮ ಕಣ್ಣುಗಳನ್ನು ಮುಚ್ಚಬೇಕು. ಹೀಗೆ ನೀವು ಮಾಡಿದಾಗ, ನಿಮ್ಮ ದೃಷ್ಟಿಯನ್ನು ನೇರವಾಗಿ ನಿಲ್ಲಿಸುತ್ತೀರಿ. ಇದು ತುಂಬ ಮುಖ್ಯ. ತಮ್ಮ ಹಂತದ ಧ್ಯಾನದಲ್ಲಿ ಮಂತ್ರೋಚ್ಚಾರಣೆ ಮಾಡುವವರು ಮಂತ್ರೋಚ್ಚಾರಣೆಗೆ ಹೆಚ್ಚು ಗಮನಕೊಡಬೇಕು, ಅದರಲ್ಲೂ ಅವರಿಗೆ ನಿದ್ರೆ ಬರುವಂತಾದಾಗ.

ಕೆಲವರು ಫ್ಲೀಸನ್ನು ತಡವಾಗಿ ಕೊಡುತ್ತಾರೆ. ನಾವು ವಿನಯವಾಗಿ ಅವರಿಗೆ ನೆನಪುಮಾಡಿಕೊಟ್ಟಾಗ, ಅವರು ಕೋಪಗೊಳ್ಳಬಾರದು. ನಮ್ಮ ಕಾರ್ಯಕರ್ತರು ಸೌಮ್ಯ ಸ್ವಭಾವದವರು. ಆದ್ದರಿಂದ ನಿಮಗೆ ಅವರಲ್ಲಿ ಯಾರಾದರೂ ಯಾವುದರ ಬಗ್ಗೆಯಾದರೂ ನೆನಪು ಮಾಡಿಕೊಟ್ಟಾಗ ದಯವಿಟ್ಟು ಕೋಪಮಾಡಿಕೊಳ್ಳಬೇಡಿ. ಕೆಲವೊಮ್ಮೆ ನಾವು ಗಡುಸಾಗಬೇಕಾಗುತ್ತದೆ, ಅದನ್ನು ನೀವು ಸಹಿಸಿಕೊಳ್ಳಬೇಕು. ಇಲ್ಲಿಯ ವಾತಾವರಣವನ್ನು ಯಾವಾಗಲೂ ತುಂಬ ಹಿತಕರವಾಗಿಟ್ಟುಕೊಳ್ಳೋಣ. ಅಹಿತಕರವಾದುದಕ್ಕೆ ನಾವು ಎಂದೆಂದಿಗೂ ಸಹಕಾರ ನೀಡುವುದಿಲ್ಲ.

ಜೀವಂತವಾಗಿರುವ ಮಾಸ್ಟರ್ ಒಬ್ಬರು, "ಬ್ರಹ್ಮಾನಂದಕ್ಕೆ (Bliss) ವಿರುದ್ಧವಾದುದು ಇಲ್ಲ" ಎಂಬ ಹೇಳಿಕೆಯನ್ನು ಕೊಟ್ಟಿದ್ದನ್ನು ನಿಯತಕಾಲಿಕವೊಂದರಲ್ಲಿ ಓದಿದೆ. ಇದರ ಬಗ್ಗೆ ಯೋಚಿಸಲು ಪ್ರಾರಂಭಿಸಿದೆ. ಮಾನವರ ಈ ಭೂಮಿಯಲ್ಲಿ ಯಾವಾಗಲೂ ವಿರುದ್ಧವಾದವುಗಳಿರುತ್ತವೆ – ಸಂತೋಷ ಮತ್ತು ಅಸಂತೋಷ, ಒಳ್ಳೆಯದು ಮತ್ತು ಕೆಟ್ಟದ್ದು, ನೋವು ಮತ್ತು ನಲಿವು. ಯಾರಾದರೂ ನನಗೆ ಬ್ರಹ್ಮಾನಂದದ ಅನುಭವವಾಗಿದೆ ಎಂದು ಹೇಳಿದರೆ ಅವರಿಗೆ ಬ್ರಹ್ಮಾನಂದವೆಂದರೇನೆಂದು ತಿಳಿದಿಲ್ಲ, ಏಕೆಂದರೆ ಈ ಭೂಮಿಯಲ್ಲಿ ಅದನ್ನು ಅನುಭವಿಸಲು ಯಾರಿಗೂ ಸಾಧ್ಯವಿಲ್ಲ; ಇದು ದ್ವಿತ್ವದ ಭೂಮಿ, ಧ್ಯಾನದಲ್ಲಿ ನಾವು ಈ ಸ್ತರವನ್ನು ದಾಟಿಹೋಗಬೇಕು. ನಮ್ಮ ಅರಿವನ್ನು ಈ ಸ್ತರದಿಂದ ಮೇಲೆ ತೆಗೆದುಕೊಂಡು ಹೋಗಿ ಸಮುದ್ರದ ಒಂದು ನೀರಿನ ಹನಿಯಂತೆ ನಾವು ದೈವದೊಂದಿಗೆ ಒಂದಾದಾಗ, ನಾವು ಕೇಳಿರುವ, ಮಾತನಾಡುತ್ತಿರುವ ಈ ಬ್ರಹ್ಮಾನಂದವನ್ನು ಅನುಭವಿಸುತ್ತೇವೆ. ಇದೊಂದು ಅತಿ ವೈಯಕ್ತಿಕ ಅನುಭವ. ಬ್ರಹ್ಮಾನಂದವನ್ನು ಅನುಭವಿಸಲು ಅದರ ಸ್ತರವನ್ನು ತಲುಪಬೇಕು. ಅದರಿಂದಾಗಿಯೇ ಬ್ರಹ್ಮಾನಂದಕ್ಕೆ ವಿರುದ್ಧವಾದುದು ಇಲ್ಲ ಎಂದು ಆ ಮಾಸ್ಟರ್ ಹೇಳಿದ್ದು. ಆ ಸ್ತರದಲ್ಲಿ ಏಕತೆ ಮತ್ತು ಬ್ರಹ್ಮಾನಂದ ಮಾತ್ರ ಇದೆ.

1948ರ ಜನವರಿ 30ರಂದು ಗಾಂಧೀಜಿಯವರನ್ನು ಗುಂಡಿಟ್ಟು ಕೊಲ್ಲಲಾಯಿತು. ಆ ದಿನ ನನಗೆ ನೆನಪಿದೆ, ನನಗೆ ಆಗ 9ವರ್ಷಗಳು. ಈ ಸುದ್ದಿಯನ್ನು ಧ್ವನಿವರ್ಧಕಗಳಲ್ಲಿ ಬಿತ್ತರಿಸಿದಾಗ, ಜನರು ಬಿಕ್ಕಿ ಬಿಕ್ಕಿ ಅಳುವುದನ್ನು ನಾನು ಕಂಡಿದ್ದೆ. ಇಡೀ ದೇಶ ಕಣ್ಣೀರಿಟ್ಟಿತು. ಅಂಥವರು ಅಪರೂಪಕ್ಕೊಮ್ಮೆ, ದಶಕಗಳಿಗೊಮ್ಮೆ, ಹುಟ್ಟಿಬರುತ್ತಾರೆ. ಈ ವ್ಯಕ್ತಿಯನ್ನು ವಿಶೇಷವಾಗಿಸಿದ್ದು ಏನು? ಅದು ಅವರಲ್ಲಿದ್ದ ಶಕ್ತಿ, ಸತ್ಯದ ಶಕ್ತಿ. ಅವರು ಸತ್ಯವಂತರಾಗಿ ಬಾಳಿದರು. ಅವರು ಅತ್ಯಂತ ಬಲಶಾಲಿಯಾಗಿದ್ದರಿಂದಲೇ ಅವರಿಗೆ ಅಹಿಂಸೆಯನ್ನು ಪಾಲಿಸಲು ಸಾಧ್ಯವಾಯಿತು. ಬಲಹೀನ ಜನರಿಗೆ ಅಹಿಂಸೆಯ ಬಗ್ಗೆ ಮಾತನಾಡಲು ಸಾಧ್ಯವಿಲ್ಲ. ಅಂಥವರು ಅಭದ್ರರಾಗಿರುತ್ತಾರೆ. ಗಾಂಧೀಜಿಯವರು ಉಪವಾಸಕ್ಕೆ ಕುಳಿತಾಗಲೆಲ್ಲಾ ಆಮರರವರೂ ಉಪವಾಸ ಮಾಡಿದರು. ಅಮರರವರು ಉಪವಾಸ ಮಾಡುತ್ತಿದ್ದಾಗ ಕೆಲಸ ಮಾಡುತ್ತಿದ್ದರು, ಅವರು ಉಪವಾಸ ಮಾಡುತ್ತಿರುವುದನ್ನು ಯಾರಿಗೂ ತಿಳಿಸುತ್ತಿರಲಿಲ್ಲ. ಅಮರರವರಿಗೆ ಗಾಂಧೀಜಿಯವರ ಮೇಲೆ ಅಷ್ಟೊಂದು ಗೌರವವಿತ್ತು.

ಒಮ್ಮೆ ನಾನು ವಿಶ್ವಚೇತನ ಮಂದಿರದಲ್ಲಿ (Cosmic Tower) ಧ್ಯಾನಮಾಡಿದಾಗ, ಈ ಭೌತಿಕ ದೇಹವನ್ನು ಬೆಳಕಿನ ದೇಹವನ್ನಾಗಿಸುವ ಬಗೆಗಿನ ಮಾಹಿತಿಯನ್ನು ನನಗೆ ಕೊಡಲಾಯಿತು. ಅದನ್ನು ನಾನು ಅಭ್ಯಾಸ ಮಾಡಲಿಲ್ಲ ಅಥವ ಪ್ರಯತ್ನಿಸಲಿಲ್ಲ. ಅದೊಂದು ಸಣ್ಣ ತಂತ್ರ. ಅದಕ್ಕೆ ಪ್ರಪ್ರಥಮವಾಗಿ ಬೇಕಾಗಿರುವುದು ನಾವು ನಮ್ಮ ಈ ಶಾರೀರಿಕ ವ್ಯವಸ್ಥೆಯನ್ನು ಶುದ್ಧಗೊಳಿಸಿಕೊಳ್ಳುವುದು, ಧ್ಯಾನಮಾಡುವುದು ಮತ್ತು ಸಕಾರಾತ್ಮಕರಾಗುವುದು. ಇದನ್ನು ಸಾಧಿಸಿದ ನಂತರ ಈ ದೇಹವನ್ನು ಬೆಳಕಿನ ದೇಹವನ್ನಾಗಿಸಿಕೊಳ್ಳಬಹುದು.

ಮೂರು ಅನುಭವಗಳನ್ನು ಉಲ್ಲೇಖಿಸ–ಬಯಸುತ್ತೇನೆ.

ಒಬ್ಬ ಸಣ್ಣ ಹುಡುಗಿಯು ತನ್ನ ರೂಮಿಗೆ ಮತ್ತೊಬ್ಬ ಹುಡುಗಿಯು ಪ್ರವೇಶಿಸುವುದನ್ನು ಇದ್ದಕ್ಕಿದ್ದಂತೆ ನೋಡಿದಳು, ಸ್ವಲ್ಪ ಸಮಯದ ನಂತರ ಆಕೆ ಮಾಯವಾದಳು. ಈ ವಿಷಯವನ್ನು ಋಷಿಗಳಿಗೆ ತಿಳಿಸಿದಾಗ, ಈ ಹುಡುಗಿಯು ಕ್ಷಣಕಾಲ ಭವಿಷ್ಯತ್ತಿಗೆ ಹೋಗಿ ತನ್ನನ್ನೇ ನೋಡಿದ್ದಾಳೆ ಎಂದು ಅವರುಗಳು ಹೇಳಿದರು. ಆರು ಅಥವ ಹತ್ತು ವರ್ಷಗಳ ನಂತರದ ತನ್ನದೇ ಭವಿಷ್ಯತ್ತಿನ ವ್ಯಕ್ತಿತ್ವವನ್ನು ಆಕೆ ನೋಡಿದ್ದಳು. ಅದೊಂದು ಅದ್ಭುತ ಅನುಭವ!

ಒಬ್ಬ ವ್ಯಕ್ತಿಗೆ ಕನಸಿನಂತಹ ಒಂದು ಅನುಭವವಾಯಿತು. ಆಕೆ ಸೂಕ್ಷ್ಮಮಟ್ಟದಲ್ಲಿ ದಿವ್ಯ ವ್ಯಕ್ತಿಯೊಬ್ಬರನ್ನು ಭೇಟಿಮಾಡಿ, ಆಕೆಯ ಗುರುವು ಆಕೆಯನ್ನು ಅವರ ಬಳಿಗೆ ಕಳಿಸಿರುವುದಾಗಿ ಅವರಿಗೆ ಹೇಳಿದರು. ಅವರೇಕೆ ನಿನ್ನನ್ನು ಕಳಿಸಿದ್ದಾರೆಂದು ನನಗೆ ತಿಳಿದಿದೆ ಎಂದು ಅವರು ಉತ್ತರಿಸಿ, ಒಂದು ಹಳೆಯ ಪುಸ್ತಕವನ್ನು ಆಕೆಗೆ ಕೊಟ್ಟು ಅದನ್ನು ಆಕೆಯ ಗುರುವಿಗೆ ಕೊಡಲು ಹೇಳಿದರು. ಈ ಅನುಭವದ ಮಹತ್ವವನ್ನು ಅರಿಯಲು ನಾನು ಪ್ರಯತ್ನಿಸಿದಾಗ, ನಾನು ಆ ಜ್ಞಾನವನ್ನು ಪಡೆಯಬೇಕೆಂಬುದು ಈ ದಿವ್ಯ ವ್ಯಕ್ತಿತ್ವದ ಬಯಕೆಯಾಗಿತ್ತು ಎಂದು ಅರ್ಥಮಾಡಿಕೊಂಡೆ. ಅದೊಂದು ಪುರಾತನ ಜ್ಞಾನವಾಗಿತ್ತು, ಏಕೆಂದರೆ ಆ ಪುಸ್ತಕ ಹಳೆಯದಾಗಿತ್ತು. ಆ ಜ್ಞಾನದ ಅರ್ಥವನ್ನು ನಾನು ಇನ್ನೂ ಅರಿಯಬೇಕಿದೆ. ಆ ಸ್ತ್ರೀಯು ಎಳೆಯ ವಯಸ್ಸಿನವರಾಗಿದ್ದು ನಮ್ಮ ಮುಂದಿನ ಕಾರ್ಯಕರ್ತೆಯಿರಬಹುದು ಎಂದು ಕೂಡ ಋಷಿಗಳು ಹೇಳಿದರು. ಕೆಲವೊಮ್ಮೆ ಜನರಿಗೆ ಈ ರೀತಿಯ ಸೂಕ್ಷ್ಮ ಮಟ್ಟದ ಕೆಲಸಗಳನ್ನು ಕೊಡಲಾಗುತ್ತದೆ, ಋಷಿಗಳ ಕಾರ್ಯಕರ್ತರಾಗಲು ಆ ರೀತಿಯಲ್ಲಿ ತರಬೇತು ನೀಡುತ್ತಾರೆ. ಅನೇಕ ವರ್ಷಗಳವರೆಗೆ ಅವರಿಗೆ ತರಬೇತಿ ನೀಡಲಾಗುತ್ತದೆ; ಕೆಲವೊಮ್ಮೆ ನೂರಾರು ವರ್ಷಗಳು. ಅದೊಂದು ಅತ್ಯಾಶ್ಚರ್ಯಕರ ಅನುಭವ!

ಧ್ಯಾನಿಯಲ್ಲದವರೊಬ್ಬರು ನನಗೆ ಪತ್ರ ಬರೆದರು: ಅವರ ಕನಸಿನಲ್ಲಿ, ವ್ಯಕ್ತಿಯೊಬ್ಬರು ಅವರ ಕೈಹಿಡಿದು ಪೂಜಾಸ್ಥಳವೊಂದಕ್ಕೆ ಕರೆದೊಯ್ದರು ನಂತರ ಆ ವ್ಯಕ್ತಿಯು ಇದ್ದಕ್ಕಿದ್ದಂತೆ ಬೆಳಕಾದರು ಹಾಗೂ ಅಂತರ್ಧಾನರಾದರು. ಮುಂದೆ, ಅನಿರೀಕ್ಷಿತವಾಗಿ ಅವರಿಗೆ 'ಬೆಳಕಿಗೆ ಬಾಗಿಲುಗಳು' ಪುಸ್ತಕವು ದೊರಕಿತು, ಅದರಲ್ಲಿ ಅಮರರವರ ಭಾವಚಿತ್ರವನ್ನು ನೋಡಿದರು. ಅವರನ್ನು, ಕನಸಿನಲ್ಲಿ ಮಾರ್ಗದರ್ಶನ ನೀಡಿದ ವ್ಯಕ್ತಿಯೆಂದು ಅವರು ಗುರುತಿಸಿದರು!

ನಾವು ಧ್ಯಾನವನ್ನು ಮಾಡಲು ಆರಂಭಿಸಿ ಒಳ್ಳೆಯದನ್ನೇ ಮಾಡಿದ್ದೇವೆ ಹಾಗೂ ನಮಗೆ ಮಾರ್ಗದರ್ಶಿಸಲು, ಸಹಾಯ ಮಾಡಲು, ರಕ್ಷಿಸಲು ಹಾಗೂ ಸಾಂತ್ವನ ನೀಡಲು ಋಷಿಗಳು ಸದಾಕಾಲ ಇದ್ದಾರೆ ಎನ್ನುವ ಋಷಿಗಳ ಭರವಸೆಯ ಸ್ಪಷ್ಟ ಸಂದೇಶವನ್ನು ಈ ಅನುಭವಗಳಿಂದ ನಾವು ಪಡೆಯುತ್ತೇವೆ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

25.08.2013

ಒಮ್ಮೆ ಗುರೂಜಿಯವರು ಮಹರ್ಷಿ ಅಮರರವರನ್ನು, ನೀವು ನಿಮ್ಮ ಜೀವನೋದ್ದೇಶವನ್ನು ಈಡೇರಿಸಿದ್ದೀರಾ ಎಂದು ಕೇಳಿದರು. ಅದಕ್ಕೆ ಅಮರಾಜಿಯವರು, ಋಷಿಗಳ ಕೇಂದ್ರವನ್ನು ಸ್ಥಾಪಿಸಲು ಜನರನ್ನು ಸೇರಿಸುವುದು ನನ್ನ ಜೀವನೋದ್ದೇಶವಾಗಿತ್ತು ಎಂದು ತಿಳಿಸಿದರು. ತಮ್ಮ ಯೋಚನಾ ಸಾಮರ್ಥ್ಯದಿಂದ ಅವರು ಅದನ್ನು ಬಯಸಿದರು, ಅಷ್ಟುಮಾತ್ರಕ್ಕೇ ಋಷಿಗಳ ಕೇಂದ್ರವನ್ನು ಸ್ಥಾಪಿಸುವ ಕೆಲಸಕ್ಕೆ ಜನರು ತಾವಾಗಿಯೇ ಬಂದು ಒಟ್ಟುಗೂಡಿದರು. ಅತ್ಯುನ್ನತ ವ್ಯಕ್ತಿಯಾದ ಅವರು, ಜನರನ್ನು ಒಟ್ಟುಗೂಡಿಸುವುದಷ್ಟೇ ತನ್ನ ಕೆಲಸವೆಂದು ಹೇಳಿದ್ದು, ಈ ಮಹಾನ್ ಮಾಸ್ಟರ್‌ರವರ ವಿನಯವಂತಿಕೆಗೆ ಮತ್ತೊಂದು ಉದಾಹರಣೆಯಾಗಿದೆ.

ಈ ಮಾಸ್ಟರ್‌ಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಮಟ್ಟದಿಂದಲೇ ಅವರ ಕೆಲಸವನ್ನು ನೋಡಿದಾಗ ಕೂಡ, ಇಡೀ ಮನುಕುಲದ ಏಳಿಗೆಯನ್ನು ಒಳಗೊಂಡಿರುವ ಬಹು ದೊಡ್ಡ ಹಾಗೂ ಪವಿತ್ರವಾದ ಕೆಲಸದಲ್ಲಿ ಅವರು ತೊಡಗಿದ್ದರು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಅವರ ಕೆಲಸವು ಅತಿ ಸೂಕ್ಷ್ಮದ್ದಾಗಿದ್ದು, ಹಲವಾರು ಸಂದರ್ಭಗಳಲ್ಲಿ ಅವರನ್ನು ಅತ್ಯಂತ ಕಷ್ಟಕ್ಕೀಡುಮಾಡುತ್ತಿತ್ತು. ವಿರುದ್ಧ ಬಣದ ಶಕ್ತಿಗಳು, ಅವರಿಗೆ ಹಾನಿ ಮಾಡಲು ಪ್ರಯತ್ನಿಸಿದ ಉದಾಹರಣೆಗಳಿವೆ. ಅವರ ಜೀವನವು ತುಂಬಾ ಸಾಹಸಮಯದ್ದಾಗಿತ್ತು. ಅವರು ವಿನಯವಂತಿಕೆಯ, ಧೈರ್ಯದ ಮತ್ತು ಶಕ್ತಿಯ ಸಾಕಾರರೂಪವಾಗಿದ್ದರು ಎಂದು ಗುರೂಜಿಯವರು ಯಾವಾಗಲೂ ಹೇಳುತ್ತಿದ್ದರು.

ಗುರೂಜಿಯವರು ದೇಹತೊರೆದ ನಂತರ, ಗುರೂಜಿಯವರೇ ಸ್ಥಾಪಿಸಿದ ವ್ಯವಸ್ಥೆಗಳನ್ನು ನಡೆಸಿಕೊಂಡು ಹೋಗಲು ಪ್ರಯತ್ನಿಸಿದ್ದೇವೆ. ಗುರೂಜಿಯವರು ನಮ್ಮ ಜೊತೆಯಲ್ಲಿ ಇಲ್ಲದಿರುವಾಗ ನಮ್ಮ ನಿಜವಾದ ಕೆಲಸವಾದರೂ ಏನು? ವೈಯಕ್ತಿಕವಾಗಿ ನಾವೆಲ್ಲರೂ ಧ್ಯಾನ ಮಾಡಬೇಕು ಮತ್ತು ಬೆಳೆಯುತ್ತಾ ಹೋಗಬೇಕು. ನಮಗೆ ಜ್ಞಾನ, ಚೈತನ್ಯಗಳು, ಮಾರ್ಗದರ್ಶನ ಎಲ್ಲವೂ ಇವೆ. ನಾವು ಯಾವ ಮಟ್ಟದವರೆಗೆ ಬೇಕಾದರೂ ಬೆಳೆಯಬಹುದು. ಋಷಿಗಳಿಂದ ಮೇಲ್ವಿಚಾರಣೆಯೂ ಮುಂದುವರೆಯುತ್ತದೆ. ಜ್ಞಾನವನ್ನು ಅರಗಿಸಿಕೊಳ್ಳುತ್ತಾ ಬೆಳೆಯುವುದನ್ನು ಮುಂದುವರೆಸಬಹುದು, ಹೆಚ್ಚು ಪ್ರೀತಿ ಮತ್ತು ಹೆಚ್ಚು ದೈವತ್ವವನ್ನು ಅಭಿವ್ಯಕ್ತಿಸಬಹುದು.

ಜನರಿಗೆ ಜ್ಞಾನ ಮತ್ತು ಚೈತನ್ಯಗಳು ಲಭ್ಯವಾಗುವಂತೆ ಮಾಡುವ ಮೂಲಕ ಅಮರಾಜಿಯವರು ಮತ್ತು ಗುರೂಜಿಯವರು ಜನರಿಗೆ ಲಭ್ಯವಿರುವಂತೆ ಮಾಡುವುದೇ ಇಲ್ಲಿನ ಕೆಲಸದಲ್ಲಿ ತೊಡಗಿಸಿಕೊಂಡಿರುವ ಜನರು ಈ ಕಾಲಘಟ್ಟದಲ್ಲಿ ಮಾಡಬೇಕಾದ ಕೆಲಸ. ಗುರೂಜಿಯವರು ಋಷಿಗಳ ಸಹಾಯದಿಂದ ಅಭಿವೃದ್ಧಿಪಡಿಸಿರುವ ಪಠ್ಯ ಕ್ರಮದಂತೆಯೇ ಜನರಿಗೆ ಧ್ಯಾನದಲ್ಲಿ ಮಾರ್ಗದರ್ಶಿಸುವುದು ನಮ್ಮ ಕೆಲಸ. ಗುರೂಜಿಯವರು ಪ್ರಾರಂಭಿಸಿರುವ "ಬೆಳಕಿನಿಂದ ಕ್ರಾಂತಿ"ಯನ್ನು ಮುಂದುವರೆಸುವುದು ಹಾಗೂ ಅದನ್ನು ಬಲಪಡಿಸುವುದು ನಮ್ಮ ಕೆಲಸ. ಈ ಕೆಲಸಕ್ಕೆ ಸಮರ್ಪಿಸಿಕೊಂಡಿರುವ ಕಾರ್ಯಕರ್ತರ ತಂಡವೊಂದರ ಮೂಲಕ ಇದನ್ನು ಮಾಡುತ್ತಿದ್ದೇವೆ. ಅವರು ಇಂಟರ್‌ನೆಟ್‌ನ ಅನೇಕ ವೇದಿಕೆಗಳಲ್ಲಿ ಗುರೂಜಿಯವರ ಸಂದೇಶಗಳನ್ನು ಪೋಸ್ಟ್ ಮಾಡುವ ಮೂಲಕ ಲಕ್ಷಾಂತರ ಜನರಿಗೆ ತಲುಪಿಸುತ್ತಿದ್ದಾರೆ.

24–11–2013

ಗುರೂಜಿಯವರ ಮಹಾಸಮಾಧಿಯ ದಿನ ತಪೋನಗರವು ಗುರೂಜಿಯವರ ಉಪಸ್ಥಿತಿಯ ಕಂಪನಗಳಿಂದ ತುಂಬಿತುಳುಕುತ್ತಿತ್ತು ಎಂದು ವ್ಯಕ್ತಿಯೊಬ್ಬರು ಹೇಳಿದರು. ಅವರು ಗುರೂಜಿಯವರ ಪ್ರೀತಿಯನ್ನು ಅನುಭವಿಸಿದರು. ತಮ್ಮ ಪತ್ರಕ್ಕೆ ಗುರೂಜಿಯವರಿಂದ ಉತ್ತರ ಬಂದಾಗ ತಮಗೆ ಅತೀವ ಆನಂದವಾಗುತ್ತದೆಂದು ವ್ಯಕ್ತಿಯೊಬ್ಬರು ಹೇಳಿದರು. ಅವರು ಬರೆದ ಕೆಲವೇ ಪದಗಳ ಹಿಂದೆ ಹೇರಳವಾದ ಪ್ರೀತಿಯಿರುತ್ತಿತ್ತು. ಈ ಹೇರಳವಾದ ಪ್ರೀತಿಯು ನಮ್ಮ ಭಾವನೆಯನ್ನು ಮೇಲಕ್ಕೇರಿಸುತ್ತಿತ್ತು.

ನಾವೊಮ್ಮೆ ಗುರೂಜಿಯವರೊಂದಿಗೆ ಮಹಾರಾಷ್ಟ್ರಕ್ಕೆ ಹೋಗಿದ್ದೆವು. ಅಲ್ಲಿಯ ಜನ ತುಂಬಾ ಸಂಪ್ರದಾಯವಾದಿಗಳಾಗಿದ್ದು ಕೆಲವು ಆಚರಣೆಗಳನ್ನು ಪಾಲಿಸುತ್ತಿದ್ದರು. ಗುರೂಜಿಯವರಿಗೆ ಪಾದಪೂಜೆ ಮಾಡಲಾಯಿತು. ಗುರೂಜಿಯವರು ಎಂದಿಗೂ ಈ ರೀತಿಯ ಆಚರಣೆಗಳನ್ನು ಅನುಮೋದಿಸುತ್ತಿರಲಿಲ್ಲವಾದರೂ, ಅಂದು ಅದನ್ನು ವಿರೋಧಿಸದೆ ಅವರಿಗೆ ಅವಕಾಶ ಮಾಡಿಕೊಟ್ಟರು. ಆ ಜನರು ಬಹಳಷ್ಟು ಪ್ರೀತಿ ಮತ್ತು ಗೌರವದಿಂದ ಸಿದ್ಧತೆ ಮಾಡಿಕೊಂಡಿದ್ದರು. ಅವರನ್ನು ನೋಯಿಸದಿರುವುದು ತಮ್ಮ ಸ್ವಂತ ನಿಯಮಗಳೊಂದಿಗೆ ರಾಜಿ ಮಾಡಿಕೊಳ್ಳುವುದಕ್ಕಿಂತ ಉನ್ನತ ನಿಯಮವಾಗಿತ್ತು. ಗುರೂಜಿಯವರು ಆ ಉನ್ನತ ನಿಯಮವನ್ನು ಪಾಲಿಸಿದರು. ನಂತರ ಅವರು, ಅನೌಪಚಾರಿಕವಾಗಿ ಹಾಗೂ ಧ್ಯಾನ ತರಗತಿಯಲ್ಲಿ ಕೂಡ, ಪಾದಪೂಜೆಗಳು ಅವಶ್ಯಕವಲ್ಲ, ಅದರಿಂದ ಯಾರಿಗೂ ಪ್ರಯೋಜನವಿಲ್ಲ, ಅದು ಗುರುವನ್ನೇ ಪೇಚಿನ ಸ್ಥಿತಿಯಲ್ಲಿಡುತ್ತದೆ ಎಂದು ತುಂಬಾ ನಿಧಾನವಾಗಿ ಮತ್ತು ಮೃದುವಾಗಿ ವಿವರಿಸಿದರು. ಪಾದಪೂಜೆ ಗೌರವ ಸೂಚಿಸುವ ಕಾರ್ಯವೆನ್ನುವುದು ಸತ್ಯ, ಆದರೆ ಗೌರವವನ್ನು ನಮ್ಮ ಹೃದಯಗಳಲ್ಲಿ ಹೊಂದಿರಬಹುದು. ಒಬ್ಬರು ಪಾದಪೂಜೆಯನ್ನು ಮಾಡಬಹುದು, ಆದರೆ ಅವರ ಹೃದಯದಲ್ಲಿ ಗೌರವವಿಲ್ಲದಿರಬಹುದು. ಆಗ ಅದು ಕಪಟ ಅಭಿವ್ಯಕ್ತಿಯಾಗುತ್ತದೆ. ಏನೇ ಆಗಲಿ ಯಾರನ್ನೂ ನೋಯಿಸದೆ ತುಂಬಾ ಮೃದುವಾಗಿ ಶಿಕ್ಷಣ ನೀಡುವುದು ಗುರೂಜಿಯವರ ರೀತಿ. ಜನರು ಅರ್ಥ ಮಾಡಿಕೊಳ್ಳುತ್ತಿದ್ದರು, ಕಲಿಯುತ್ತಿದ್ದರು. ಮುಂದಿನ ಸಲ ನಾವು ಮಹಾರಾಷ್ಟ್ರಕ್ಕೆ ಹೋದಾಗ ಜನರು ಪಾದಪೂಜೆ ಮಾಡಲಿಲ್ಲ. ಇದೇ ರೀತಿ, ನಮ್ಮಲ್ಲಿ ಯಾರೊಬ್ಬರ ಆಧ್ಯಾತ್ಮಿಕ ಸ್ಥಿತಿಯನ್ನೂ ಅಪಹಾಸ್ಯ ಮಾಡದೆ, ನಮಗೆ ಶಿಕ್ಷಣ ನೀಡಲು ಸರಿಯಾದ ಸಮಯ ಮತ್ತು ಸರಿಯಾದ ಅವಕಾಶಕ್ಕಾಗಿ ಅವರು ಕಾಯುತ್ತಿದ್ದರು.

ಗುರೂಜಿಯವರು ಅಷ್ಟೊಂದು ದೊಡ್ಡ ಮಾಸ್ಟರ್ ಆಗಿದ್ದರೂ, ಅವರಿಗಿದ್ದ ಕ್ಯಾನ್ಸರ್‌ನಿಂದ ಹೊರಗೆ ಬರಲು ಏಕೆ ಆಗಲಿಲ್ಲ, ಎಂದು ಕೆಲವರು ತಮ್ಮ ಶಂಕೆಯನ್ನು ವ್ಯಕ್ತಪಡಿಸಿದರು. ಅನೇಕ ಮಾಸ್ಟರ್‌ಗಳು ಜನರ ಕರ್ಮಗಳನ್ನು ತೆಗೆದುಕೊಳ್ಳುತ್ತಾರೆ. ಗುರೂಜಿಯವರೂ ಜನರ ಕರ್ಮಗಳನ್ನು ತೆಗೆದುಕೊಳ್ಳುತ್ತಿದ್ದರು. ಅವರ ಆಧ್ಯಾತ್ಮಿಕ ಶಕ್ತಿಯಿಂದ ಆ ಕರ್ಮಗಳನ್ನು ಸುಟ್ಟು ಹಾಕಬಹುದಿತ್ತು, ಆದರೆ ಕರ್ಮಗಳ ನಿಯಮಗಳನ್ನು ಅವರು ಗೌರವಿಸುತ್ತಿದ್ದುದರಿಂದಾಗಿ ಅವರು ಹಾಗೆ ಮಾಡಲಿಲ್ಲ. ಮಾಸ್ಟರ್‌ಗಳು ಕರ್ಮದ ನಿಯಮಗಳನ್ನು ಗೌರವಿಸುತ್ತಾರೆ. ಅವರು ದೈವೇಚ್ಛೆಯನ್ನು ಗೌರವಿಸುತ್ತಾರೆ. ಮಾಸ್ಟರ್‌ಗಳು ಉನ್ನತ ನಿಯಮಗಳನ್ನು ಯಾವಾಗಲೂ ಪಾಲಿಸುತ್ತಾರೆ, ಕರ್ಮಗಳನ್ನು ಗೌರವಿಸುವುದೂ ಉನ್ನತ ನಿಯಮಗಳಲ್ಲಿ ಒಂದು. ಕರ್ಮಗಳ ಶೇಖರಣೆಯಾದಾಗ ಆ ವ್ಯಕ್ತಿಯು ತಾನೇ ಧ್ಯಾನ ಮಾಡಿ ಪರಿವರ್ತನೆ ಹೊಂದಿ ಕರ್ಮಗಳನ್ನು ನಿವಾರಿಸಿಕೊಳ್ಳದಿದ್ದರೆ ಬೇರೊಬ್ಬರು ಅದನ್ನು ಅನುಭವಿಸಬೇಕು. ಏನೇ ಆಗಲಿ, ಮಾಸ್ಟರ್‌ಗಳು ಸ್ವಂತ ಅನುಕೂಲಕ್ಕಾಗಿ ತಮ್ಮ ಆಧ್ಯಾತ್ಮಿಕ ಶಕ್ತಿಗಳನ್ನು ಬಳಸಿಕೊಳ್ಳುವುದಿಲ್ಲ.

8–12–2013

ಇತ್ತೀಚೆಗೆ ಒಬ್ಬರು ನನ್ನನ್ನು ಭೇಟಿ ಮಾಡಿದರು. ಗುರೂಜಿಯವರಿಗೆ ಅವರ ಮೇಲೆ ಅಪಾರವಾದ ಪ್ರೀತಿಯಿತ್ತು ಹಾಗೂ ಆ ವ್ಯಕ್ತಿಗೂ ಕೂಡ ಗುರೂಜಿಯವರ ಮೇಲೆ ಅಪಾರವಾದ ಪ್ರೀತಿಯಿತ್ತು. ಅವರ ಇಲಾಖೆಯಲ್ಲಿ ಯಾರಿಗಾದರೂ ಹುದ್ದೆಯಲ್ಲಿ ಬಡ್ತಿ ನೀಡಿದಾಗ ಜೊತೆಯಲ್ಲಿಯೇ ವರ್ಗಾವಣೆಯನ್ನೂ ಮಾಡುತ್ತಾರೆ ಎಂದು ಅವರು ನನಗೆ ಹೇಳಿದರು. ಅದು ಎಲ್ಲರಿಗೂ ಅನ್ವಯಿಸುತ್ತದೆ. ಅದೊಂದು ನಿಯಮವಿದ್ದಂತೆ. ಅನೇಕ ಕಾರಣಗಳಿಂದಾಗಿ ಈ ವ್ಯಕ್ತಿಗೆ ವರ್ಗಾವಣೆ ಬೇಕಾಗಿರಲಿಲ್ಲ. ಅವರಿಗೆ ಬಡ್ತಿ ಸಿಕ್ಕಿತು ಆದರೆ ವರ್ಗಾವಣೆಯಾಗಲಿಲ್ಲ ಎಂದು ಸಂತೋಷದಿಂದ ಹೇಳಿಕೊಂಡರು. ಋಷಿಗಳೊಂದಿಗೆ ಇದ್ದಾಗ ಎಲ್ಲವೂ ಸಾಧ್ಯ!

'ಬೆಳಕಿಗೆ ಬಾಗಿಲುಗಳು' ಪುಸ್ತಕದಲ್ಲಿ ಮಹಾವತಾರ ಅವರ ಬಗ್ಗೆ ಗುರೂಜಿಯವರು ಬರೆದಿದ್ದಾರೆ. ಇವರು ಹೊಸ ಯುಗದಲ್ಲಿ ಇಡೀ ಭೂಮಿಯ ಮೇಲ್ವಿಚಾರಣೆಯ ಜವಾಬ್ದಾರಿ ಹೊರುವ ಒಂದು ಅವತಾರ. ಅವರು ದೊರೆಯ ರೀತಿಯಿರುವುದಿಲ್ಲ, ತಂದೆಯ ರೀತಿ ಇರುತ್ತಾರೆ. ನಾವು ಅವರನ್ನು ನೆನೆಸಿಕೊಂಡರೆ ಸಾಕು ಅವರು ನಮ್ಮ ಪಕ್ಕದಲ್ಲಿಯೇ ಇರುತ್ತಾರೆ. ನಾವು ಊಹಿಸಲೂ ಸಾಧ್ಯವಿಲ್ಲದಷ್ಟು ಸಾಮರ್ಥ್ಯ ಅವರಲ್ಲಿರುತ್ತದೆ. ಏಕ ಕಾಲದಲ್ಲಿ ಕೋಟ್ಯಾಂತರ ಜನರೊಂದಿಗೆ, ಭೌತ ದೇಹದಲ್ಲಿ ಇರುತ್ತಾರೆ. ನಾವು ಹೋಗಬೇಕೆಂದು ಬಯಸುವ ಯಾವುದೇ ಸ್ಥಳಕ್ಕಾದರೂ ಅವರು ನಮ್ಮನ್ನು ಕರೆದೊಯ್ಯುತ್ತಾರೆ. ವಿಶ್ವದ ಯಾವುದೇ ಭಾಗಕ್ಕಾದರೂ, ಸುಂದರವಾದ ಗಗನ ನೌಕೆಗಳಲ್ಲಿ ಪ್ರಯಾಣಿಸಲು ನಮಗೆ ಸಾಧ್ಯವಾಗುತ್ತದೆ. ಇದೆಲ್ಲವೂ ನಮಗೆ ಉಡುಗುರೆಯಾಗಿ ಬರಲು ಕಾಯುತ್ತಿವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು –ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆ ಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಹರ್ಷಿ ಅಮರ – ನಮ್ಮ ಪ್ರೀತಿಯ ಮಾಸ್ಟರ್

**ಶೋಭ ರಾವ್; ಅನು: ಸುಧಾಕರ್**

ಮಹಾನ್ ಮಹರ್ಷಿ ಅಮರರವರನ್ನು ನಮ್ಮ ಪ್ರೀತಿಯ ಗುರೂಜಿಯವರು ನಮಗೆ ಪರಿಚಯಿಸಿದರು. ಹಾಗೂ ಅಮರರವರು ಗುರೂಜಿಯವರ ಮೂಲಕ ಧ್ಯಾನ, ಋಷಿಗಳು, ಹೊಸಯುಗದ ಜ್ಞಾನ ಮುಂತಾದ ಬೆಲೆಕಟ್ಟಲಾಗದಂತಹ ನಿಧಿಯನ್ನು ನಮಗೆ ಕೊಟ್ಟಿದ್ದಾರೆ. ಅವರು ಸಲಹೆ ಮಾಡಿದಂತೆ ಧ್ಯಾನದ ಅಭ್ಯಾಸ ಮಾಡುವುದರಿಂದ, ಹಾಗೂ ಆಲೋಚನೆಗಳು ಮತ್ತು ಭಾವನೆಗಳನ್ನು ಸಕಾರಾತ್ಮಕಗೊಳಿಸಿಕೊಳ್ಳುವುದರಿಂದ, ದೇವರೆಡೆಗಿನ ನಮ್ಮ ನಡೆಗೆ ಖಂಡಿತವಾಗಿಯೂ ಸಹಾಯವಾಗುತ್ತದೆ. ಋಷಿಗಳು ಇದ್ದಾರೆ ಹಾಗೂ ಅವರು ಮನುಕುಲದ ಕಲ್ಯಾಣಕ್ಕಾಗಿ ನಿರಂತರವಾಗಿ ಕೆಲಸಮಾಡುತ್ತಿದ್ದಾರೆ ಎಂದು ಅಮರರವರಿಂದ ನಾವು ತಿಳಿದುಕೊಂಡಿದ್ದೇವೆ.

ದೇವರು ಒಂದು ಚೈತನ್ಯ ಎಂಬ ಅರಿವನ್ನು ಅಮರರವರು ನಮ್ಮಲ್ಲಿ ಮೂಡಿಸಿದ್ದಾರೆ. ಅವನು ಎಲ್ಲವೂ ಆಗಿದ್ದಾನೆ ಹಾಗೂ ಎಲ್ಲವನ್ನೂ ಮೀರಿದವನೂ ಆಗಿದ್ದಾನೆ. ನಮ್ಮೊಳಗೆ ಮತ್ತು ನಮ್ಮ ಸುತ್ತಮುತ್ತಲೂ ಕೂಡ ಇರುವ ದೇವರ ನಿರಾಕಾರ ಭಾಗವನ್ನು ಅಥವ ಬೆಳಕನ್ನು ನಾವು ಗುರುತಿಸಬೇಕು ಹಾಗೂ ಅನುಭವಿಸಬೇಕು ಎಂದು ಅವರು ಹೇಳುತ್ತಾರೆ.

ಮಹಾನ್ ಆಧ್ಯಾತ್ಮಿಕ ಮಾಸ್ಟರ್ ಆದ ಅಮರರವರು ಸದಾಕಾಲ ಋಷಿಗಳ ಉದಾತ್ತ ಕೆಲಸದಲ್ಲಿ ತೊಡಗಿದ್ದರೂ, ಇತರರ ಗಮನಕ್ಕೆ ಬಾರದಂತೆ ಪ್ರಚಾರದಿಂದ ದೂರವುಳಿದರು.

ಚೈತನ್ಯವೇ ಎಲ್ಲ ಜೀವನದ ಅಸ್ತಿತ್ವ ಎಂದು ಮಹರ್ಷಿ ಅಮರರವರು ನಮಗೆ ತಿಳಿಸಿಕೊಟ್ಟಿದ್ದಾರೆ. ಆದ್ದರಿಂದ, ಋಷಿಗಳು ವಿವಿಧ ರೀತಿಯ ಚೈತನ್ಯಗಳನ್ನು ನಿಯತಕಾಲಿಕವಾಗಿ ಬಿಡುಗಡೆ ಮಾಡುತ್ತಾರೆ, ಅದು ಮನುಕುಲದ ಮೇಲೆ ಪ್ರಭಾವ ಬೀರಿ ಉದ್ದೇಶಿತ ಫಲಿತಾಂಶಗಳನ್ನು ತರುತ್ತದೆ. ಈ ಪ್ರಕಟ ಪ್ರಪಂಚದಲ್ಲಿ 'ಚೈತನ್ಯಗಳ ಆಟ' ನಡೆಯುತ್ತಲೇ ಇರುತ್ತದೆ. ಋಷಿಗಳು ಬಳಕೆಮಾಡುತ್ತಿರುವ, ಅನೇಕ ಲೋಕಗಳಿಂದ ಪಡೆದ ಹೊಸ ಚೈತನ್ಯಗಳು ನಮ್ಮಲ್ಲಿ ಹೊಸ ಅರಿವನ್ನುಂಟುಮಾಡುತ್ತಿವೆ, ಹೊಸ ಜ್ಞಾನವನ್ನು ಮತ್ತು ಸತ್ಯ ಯುಗದ ವಿಧಾನಗಳನ್ನು ನಾವು ಅರ್ಥಮಾಡಿಕೊಳ್ಳುವಂತೆ ಮಾಡುತ್ತಿವೆ ಎನ್ನುವುದು ನಮಗೀಗ ತಿಳಿದಿದೆ. ನಮ್ಮ ಸುತ್ತಲೂ ಉಂಟಾಗುತ್ತಿರುವ ಬದಲಾವಣೆಗಳನ್ನು ಗುರುತಿಸುವಲ್ಲಿ ನಾವು ಯಾವಾಗಲೂ ಜಾಗೃತರಾಗಿರಬೇಕು ಹಾಗೂ ಆ ಬದಲಾವಣೆಗಳು ನಮ್ಮೊಳಗೆ ಉಂಟಾಗಲು ಅವಕಾಶ ಮಾಡಿಕೊಡಬೇಕು ಎಂದು ಅವರು ತಿಳಿಸಿದರು. ಆಗ, ನಮ್ಮಲ್ಲಿರುವ ಮತ್ತು ನಮ್ಮ ಭೂಮಿಯಲ್ಲಿರುವ ಕತ್ತಲು ಚದುರಿಹೋಗಿ, ಶಾಂತಿ, ಪ್ರೀತಿ ಮತ್ತು ಸತ್ಯಗಳಿಂದ ತುಂಬಿದ ಭವ್ಯವಾದ ಸತ್ಯ ಯುಗದ ಉದಯವಾಗುತ್ತದೆ. ■

## ಮಹರ್ಷಿ ಅಮರ

**ವೈಶಾಲಿ ಜೋಶಿ; ಅನು: ಪಾಂಡುರಂಗ**

ಈ ಭೂಮಿಯ ಮೇಲೆ ಸತ್ಯ ಯುಗ ಸ್ಥಾಪಿಸುವ ಋಷಿಗಳ ಕಾರ್ಯಯೋಜನೆಗೆ ನೆರವಾಗಲೆಂದು ಮಹಾನ್ ಮಾಸ್ಟರ್ ಮಹರ್ಷಿ ಅಮರರವರು ಈ ಭೂಮಿಗೆ ಬಂದರು. ಈ ಕೆಲಸಕ್ಕಾಗಿ, ಅಮರರವರಿಗೆ ಅವರ ಒಂಭತ್ತು ವರ್ಷ ವಯಸ್ಸಿನಲ್ಲೇ ಮೂರನೇ–ಕಣ್ಣು, ಸೂಕ್ಷ್ಮ ಪ್ರಯಾಣ, ಪ್ರತ್ಯಕ್ಷವಾಗುವುದು, ಬೇರೆ ಆಯಾಮಗಳನ್ನು ಪ್ರವೇಶಿಸುವುದು ಇತ್ಯಾದಿ ಸಾಮರ್ಥ್ಯಗಳು ವೃದ್ಧಿಸುವಂತೆ ತರಬೇತಿ ನೀಡಲಾಯಿತು. ಇದರಿಂದ ಎಲ್ಲ ಮಟ್ಟಗಳಲ್ಲಿ ಋಷಿಗಳು ವಹಿಸಿದ ಕೆಲಸವನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಅಮರರವರಿಗೆ ಸಾಧ್ಯವಾಯಿತು.

ಆಧ್ಯಾತ್ಮಿಕ ಕ್ರಾಂತಿ ಹರಡುವ ಕೆಲಸದ ಒಂದು ಭಾಗವಾಗಿ, ಅಮರರವರು ತಮ್ಮ ಹದಿನೇಳನೇ ವಯಸ್ಸಿನಲ್ಲೇ ಧ್ಯಾನವನ್ನು ಕಲಿಸಲು ಆರಂಭಿಸಿದರು. ಧ್ಯಾನವು ಉಸಿರಾಟದಷ್ಟೇ ಮುಖ್ಯವೆಂದು ಅವರು ಹೇಳಿದರು. ನಾವು ಹೊಸ ಯುಗದಲ್ಲಿ ಮುಂದುವರಿದಂತೆ, ನಮ್ಮ ಜೀವನದ ಹಳೇ ಜಾಡನ್ನು ಬಿಟ್ಟು ಹೊಸ ದಾರಿಗಳನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತಿದ್ದರು. ಪ್ರಳಯದ ಪ್ರಭಾವದಿಂದ ಆಗುವ ಬದಲಾವಣೆಗಳನ್ನು ವಿರೋಧಿಸದೆ ಒಪ್ಪಿಕೊಳ್ಳಬೇಕು, ಮತ್ತು ನಾವು ವಿರಾಗಿಗಳಾಗಿರಲೂ ಕಲಿಯಬೇಕು. ನಾವು ಪ್ರಜ್ಞಾಪೂರ್ವಕವಾಗಿ ಸಕಾರಾತ್ಮಕ ಪ್ರವೃತ್ತಿಗಳನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ನಮ್ಮ ಅಹಂ ಅನ್ನು ಬಿಡಬೇಕು. ಉನ್ನತ ಸತ್ಯಗಳನ್ನು ತಿಳಿದುಕೊಳ್ಳಲು ನಾವು ಕಲಿತಿದ್ದನ್ನು ಬಿಡಬೇಕು. ನಾವು ಬೆಳೆಯಬೇಕು, ಮುಕ್ತಮನಸ್ಕರಾಗಿರಬೇಕು, ಮತ್ತು ಆಂತರಿಕ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಬೇಕು. ನಾವು ನೇರವಾಗಿ ಅನುಭವಗಳನ್ನು ಪಡೆಯುವ ವ್ಯಾಪ್ತಿಯನ್ನು ತಲುಪಿ, ವಾಸ್ತವತೆಗಳನ್ನು ನೇರವಾಗಿ ಗ್ರಹಿಸಬೇಕು. ಹಾಗೂ ಇದೆಲ್ಲವನ್ನು ಕಾರ್ಯಗತಗೊಳಿಸಲು ನಾವು ಧ್ಯಾನದಿಂದ ಆರಂಭಿಸಬೇಕು.

ನಾವು ಧ್ಯಾನ ಮಾಡಿದಾಗ, ಪರಿವರ್ತನೆಯ ಪ್ರಕ್ರಿಯೆ ನಮ್ಮೊಳಗಿನಿಂದ ಪ್ರಾರಂಭವಾಗುವುದೆಂದು ಅವರು ವಿವರಿಸಿದರು. ನಾವು ಈ ಪರಿವರ್ತನೆಯು ಸಂಭವಿಸಲು ಅನುವು ಮಾಡಿಕೊಡಬೇಕು. ಇದಕ್ಕಾಗಿ ನಾವು ನಮ್ಮನ್ನು ಉನ್ನತ ದೈವೀ ಶಕ್ತಿಗಳಿಗೆ ಅರ್ಪಿಸಿಕೊಂಡು, ಅವುಗಳಿಗೆ ಶರಣಾಗತರಾಗಿ, ನಮ್ಮೊಳಗೆ ಕೆಲಸ ಮಾಡಲು ದಾರಿ ಮಾಡಿಕೊಡಬೇಕು. ಧ್ಯಾನದ ಸಮಯದಲ್ಲಿ ನಮಗೆ ಅನುಭವವಾದ ಶಾಂತತೆಯ ಕ್ಷಣಗಳನ್ನು, ನಮ್ಮ ದಿನನಿತ್ಯದ ಜೀವನಕ್ಕೆ ವಿಸ್ತರಿಸಲು ಬಿಡಬೇಕು. ಈ ಶಾಂತತೆ ನಮ್ಮಲ್ಲಿ ಸ್ಥಿರತೆ, ಸಮಚಿತ್ತತೆ ಮತ್ತು ವಿವೇಕವನ್ನುಂಟುಮಾಡುತ್ತದೆ ಹಾಗೂ ನಮ್ಮ ಜೀವನವನ್ನು ಆಧ್ಯಾತ್ಮಿಕಗೊಳಿಸಲು ಸಹಾಯ ಮಾಡುತ್ತದೆ. ಇದರಿಂದ, ನಮ್ಮ ಜೀವ–ಶಕ್ತಿಯನ್ನು ಅಭಿವ್ಯಕ್ತಿಸಲು, ಜೀವನವನ್ನು ಸಂಪೂರ್ಣವಾಗಿ ಜೀವಿಸಲು ಮತ್ತು ಈ ಸೃಷ್ಟಿಯನ್ನು ಅನುಭವಿಸಲು ನಮಗೆ ಸಾಧ್ಯವಾಗುತ್ತದೆ. ಆಗ, ನಾವು ಇಲ್ಲಿಗೆ ಮೊತ್ತಮೊದಲು ಬಂದ ಉದ್ದೇಶವನ್ನು ಈಡೇರಿಸಿಕೊಂಡಂತಾಗುತ್ತದೆ. ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ.ರಾವ್; ಅನು: ಪಾಂಡುರಂಗ

**ಪ್ರಶ್ನೆ: ನಾವು ನಮ್ಮ ಎಲ್ಲ ಅನುಭವಗಳನ್ನು ಅಲಕ್ಷಿಸಬೇಕೆ?**

ಉ: ನಾವು ಈ ಎಲ್ಲ ಅನುಭವಗಳನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು. ಕೆಲವೊಮ್ಮೆ ಕೆಲವು ಅನುಭವಗಳ ಹಿಂದೆ ನಮಗೆ ಸಂದೇಶಗಳು ಇರುತ್ತವೆ. ಕೆಲವು ಮಾತ್ರ ಪ್ರಾಮಾಣಿಕ ಅನುಭವಗಳಾಗಿರುತ್ತವೆ. ಆದರೆ ನೀವು ತುಂಬಾ ವಿವೇಚನೆಯಿಂದ ಯಾವ ಅನುಭವ ಪ್ರಾಮಾಣಿಕವಾದುದು ಮತ್ತು ಯಾವ ಅನುಭವ ನಮ್ಮ ಮನೋಕಲ್ಪಿತ ಎಂದು ತಿಳಿದುಕೊಳ್ಳಬೇಕು. ಆದರೆ ಯಾವುದೇ ರೀತಿಯದಾಗಿರಲಿ, ನಾವು ಯಾವತ್ತೂ ಅನುಭವಗಳನ್ನು ನಿರೀಕ್ಷಿಸಬಾರದು. ನಾವು ಅನುಭವಗಳನ್ನು ಬಯಸಿದರೆ, ನಮ್ಮ ಮನಸ್ಸು ಲೆಕ್ಕವಿಲ್ಲದಷ್ಟು ಅನುಭವಗಳನ್ನು ಕಲ್ಪಿಸಿಕೊಡುತ್ತದೆ.

**ಪ್ರ: ಲೈಟ್ ಚಾನಲಿಂಗ್ ಭ್ರಷ್ಟಾಚಾರವನ್ನು ಕೊನೆಗೊಳಿಸುತ್ತದೆಯೇ?**

ಉ: ಲೈಟ್ ಚಾನಲಿಂಗ್ ನೇರವಾಗಿ ಅಥವಾ ತಕ್ಷಣದಲ್ಲಿ ಭ್ರಷ್ಟಾಚಾರವನ್ನು ಕೊನೆಗೊಳಿಸುವುದಿಲ್ಲ, ಆದರೆ ಅದು ಬಹಳಷ್ಟು ಸಹಾಯ ಮಾಡುತ್ತದೆ. ಜನರು ಪರಿವರ್ತನೆ ಆಗಬಯಸಿದರೆ ಬೆಳಕು ಪರಿವರ್ತನೆಗೆ ಸಹಾಯ ಮಾಡುತ್ತದೆ. ಭ್ರಷ್ಟಾಚಾರದ ವಿರುದ್ಧ ಹೋರಾಡಬಯಸುವವರಿಗೆ ಬೆಳಕು ಸಹಾಯ ಮಾಡುತ್ತದೆ. ಕಾಲಚಕ್ರದ ಚೈತನ್ಯಗಳು ಕೂಡಾ ಈ ರೀತಿಯ ಬದಲಾವಣೆಗೆ ಸಹಾಯ ಮಾಡುತ್ತವೆ. ಲೈಟ್ ಚಾನಲಿಂಗ್ ಮತ್ತು ಹೊಸ ಯುಗ – ಇವೆರಡರಿಂದ ಆರಂಭವಾದ ಸಂಘಟಿತ ಪ್ರಕ್ರಿಯೆಗಳು ನಡೆಯುತ್ತಿವೆ. ಆಧ್ಯಾತ್ಮಿಕ ಪ್ರಕ್ರಿಯೆಗಳನ್ನು ಅರಿತುಕೊಳುವುದು ಕಷ್ಟ.

**ಪ್ರ: ಧ್ಯಾನ ಮಾಡುವಾಗ ಋಷಿಯೊಬ್ಬರ ಇರುವಿಕೆಯ ಅನುಭವವಾಗುತ್ತದೆ. ಅವರ ಜೊತೆ ಹೇಗೆ ಮಾತನಾಡಲಿ?**

ಉ: ಧ್ಯಾನ ಮಾಡುವಾಗ ಅವರ ಜೊತೆ ಮಾತನಾಡುವುದಕ್ಕೆ ಪ್ರಯತ್ನಿಸಬೇಡಿ. ಹಾಗೆ ಮಾಡಿದರೆ, ನೀವು ಧ್ಯಾನ ಮಾಡುವುದನ್ನು ಮರೆತುಬಿಡುತ್ತೀರಿ. ನಿಮ್ಮ ಗಮನವನ್ನು ಬದಲಾಯಿಸಬೇಡಿ. ಒಂದು ವೇಳೆ ಆ ಋಷಿಗೆ ನಿಮಗೇನಾದರೂ ಹೇಳುವುದು ಇದ್ದರೆ, ಅವರೇ ನಿಮಗೆ ತಿಳಿಸುತ್ತಾರೆ. ಇದಕ್ಕೆ ನೀವು ಸ್ವಲ್ಪ ಜಾಗ್ರತರಾಗಿರಬೇಕು. ಋಷಿಗಳು ನಮ್ಮನ್ನು ಗಮನಿಸುವುದಕ್ಕಾಗಿ ಅಥವಾ ನಮಗೆ ಸಹಾಯ ಮಾಡುವುದಕ್ಕಾಗಿ ಬರಬಹುದು. ಅದು ನಮಗೆ ತಿಳಿದಿಲ್ಲ. ಋಷಿಗಳ ಇರುವಿಕೆ ಅನುಭವಿಸುವುದು ಒಳ್ಳೆಯದು. ಆದರೆ ನೀವು ಬಹಳ ರೋಮಾಂಚನಗೊಳ್ಳಬೇಡಿ.

**ಪ್ರ: ನಮ್ಮಲ್ಲಿ ಜ್ಞಾನದ ದಾಹ ಹಿಂಗಿದ ಮೇಲೆ, ನಾವು ಏನು ಮಾಡಬೇಕು?**

ಉ: ನಾವು ಜ್ಞಾನವನ್ನು ದಾಟಿ ಹೋಗಬೇಕು, ನಿಶ್ಚಲತೆಯ ಅನುಭವ, ಸಮಾಧಿಯ ಅನುಭವ, ಬೆಳಕಿನ ಅನುಭವಗಳಂತಹ ಅನುಭವಗಳನ್ನು ಪಡೆಯಲು ಪ್ರಯತ್ನಿಸಬೇಕು. ಈ ಅನುಭವಗಳು ನಮಗೆ, ನಾವು ಅಂತರ್ಗತಗೊಳಿಸಿಕೊಳ್ಳಬೇಕಾದ ಹಾಗೂ ಚಿಂತನೆ ಮಾಡಬೇಕಾದ ಹೆಚ್ಚಿನ ಜ್ಞಾನವನ್ನು ಮತ್ತು ಉನ್ನತ ಮಟ್ಟದ ಜ್ಞಾನವನ್ನು ತಂದುಕೊಡುತ್ತವೆ. ಇದು ನಿರಂತರವಾಗಿ ಸಾಗುತ್ತಿರುತ್ತದೆ.

**ಪ್ರ: ದೇವರ ಅನುಭವ ನನಗೆ ಯಾವಾಗ ಆಗುತ್ತದೆ?**

ಉ: ನಾವು ಇದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ದೇವಸ್ಥಾನದೊಳಗೆ ದೇವರು ವಿಗ್ರಹ ರೂಪದಲ್ಲೇ ಇದ್ದಾನೆ ಎಂದು ನಾವು ನಂಬಿದ್ದೇವೆ. ದೇವರು ಇಲ್ಲೇ ಇದ್ದಾನೆ ಎಂಬ ಅರಿವನ್ನು ನೀವು ಹೊಂದಿದರೆ ಸಾಕು. ನಿಮ್ಮಲ್ಲಿ ದೇವರ ಬಗ್ಗೆ ಆಸೆ ಮತ್ತು ಪ್ರೀತಿ ಸಾಕಷ್ಟು ಇರಬೇಕು. ಆಗ ನಿಮಗೆ ದೇವರ ಅನುಭವವಾಗುತ್ತದೆ. ದೇವರನ್ನು ಅನುಭವಿಸಿ, ದೇವರ ಜೊತೆ ಮಾತನಾಡಿ, ಅವನು ಪ್ರತ್ಯುತ್ತರ ನೀಡುತ್ತಾನೆ.

**ಪ್ರ: ವಿವಿಧ ರೀತಿಯ ಜ್ಞಾನೋದಯಗಳಿವೆಯೇ?**

ಉ: ಒಂದೇ ಒಂದು ರೀತಿಯ ಜ್ಞಾನೋದಯವಿದೆ, ಏಕೆಂದರೆ ಇರುವುದು ಒಂದೇ ಬೆಳಕು. ಆ ಬೆಳಕಿನಿಂದಲೇ ಬೇರೆಲ್ಲ ಬೆಳಕುಗಳು ಬಂದಿವೆ, ಇಡೀ ಸೃಷ್ಟಿ ಉದಯಿಸಿದೆ. ಆದಕಾರಣ ಜ್ಞಾನೋದಯದ ಅರ್ಥ ಎಲ್ಲ ಸಮಯದಲ್ಲೂ ಬೆಳಕನ್ನು ಅನುಭವಿಸುವುದು ಅಥವಾ ನಾವೇ ಬೆಳಕಾಗುವುದು, ಹಾಗಿದ್ದರೂ ಸಾಮಾನ್ಯ ಜೀವನ ನಡೆಸುವುದು. ಆದರೆ ವಿವಿಧ ಮಟ್ಟಗಳ ಜ್ಞಾನೋದಯಗಳಿರಬಹುದು.

**ಪ್ರ: ಉನ್ನತ ಮಟ್ಟದ ಪ್ರಜ್ಞೆ ಇದೆಯೇ?**

ಉ: ಪ್ರಜ್ಞೆ ಬಗ್ಗೆ ನಾವು ಇನ್ನೂ ಹೆಚ್ಚಿನ ಅಧ್ಯಯನ ಮಾಡಬೇಕಿದೆ. ನಾವು ಗ್ರಹಿಸುವ ಎಲ್ಲದರ ಬಗ್ಗೆಯೂ ನಮಗೆ ಅರಿವುಂಟಾಗದಿರಬಹುದು. ಅವು ನಮ್ಮ ಅಂತರಾಳದಲ್ಲಿ ನಮ್ಮೊಂದಿಗೆ ಇರುತ್ತವೆ. ಉನ್ನತವಾದ ಪ್ರಜ್ಞೆ ಅಥವಾ ಅಂತರ್‌ಪ್ರಜ್ಞೆ ಇದೆಯೆಂದು ನನಗನಿಸುವುದಿಲ್ಲ. ನಾವು ಹೊಂದಿರುವ ಈ ಪ್ರಜ್ಞೆಯೇ ಪ್ರಜ್ಞೆಯಾಗಿದೆ.


**ಪ್ರ: ಅಧ್ಯಾತ್ಮಿಕತೆ ನಮ್ಮಲ್ಲಿ ಗೊಂದಲಗಳ–ನ್ನುಂಟುಮಾಡುತ್ತದೆಯೇ?**

ಉ: ಗುರುಗಳು ನಮ್ಮಲ್ಲಿ ಗೊಂದಲವ–ನ್ನುಂಟುಮಾಡಬಹುದು. ಆಧ್ಯಾತ್ಮಿಕ ಸಹವರ್ತಿಗಳು ನಮ್ಮಲ್ಲಿ ಗೊಂದಲವ–ನ್ನುಂಟುಮಾಡಬಹುದು. ವಾಸ್ತವವಾಗಿ ಅಧ್ಯಾತ್ಮಿಕತೆ, ದೇವರ ಬಗ್ಗೆ, ದೇವರ ಅನುಭವ ಪಡೆಯುವ ದಾರಿಗಳ ಬಗ್ಗೆ ಮತ್ತು ಸಂಬಂಧಗಳ ಬಗ್ಗೆ ಇರುವ ಎಲ್ಲ ರೀತಿಯ ಗೊಂದಲಗಳನ್ನು ನಿರ್ಮೂಲನ ಮಾಡುತ್ತದೆ. ನೀವು ಧ್ಯಾನ ಮಾಡುವುದಕ್ಕೆ ಪ್ರಾರಂಭಿಸಿ, ಆಗ ಪ್ರತಿಯೊಂದೂ ಸ್ಪಷ್ಟವಾಗುತ್ತದೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಏಪ್ರಿಲ್ 24ರ ಸಂಜೆ ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಅನ್ನು ನೋಡಲು ಹೋದಾಗ, ಅದು ಮುಚ್ಚುವ ಸಮಯವಾಗಿತ್ತು. ನಾನು ಜೀಸಸ್ ಕ್ರೈಸ್ಟ್‌ರನ್ನು ನಮಗೆ ಇನ್ನೂ ಸ್ವಲ್ಪ ಸಮಯ ಒಳಗೆ ಕುಳಿತುಕೊಳ್ಳಲು ಅವಕಾಶ ಸಿಗುವಂತೆ ಬೇಡಿಕೊಂಡಾಕ್ಷಣ, ಒಂದು ದೊಡ್ಡ ಬಿರುಗಾಳಿ ಬೀಸಿ ಚರ್ಚ್‌ನವರಿಗೆ ಬಾಗಿಲು ಮುಚ್ಚಲು ಸಾಧ್ಯವಾಗಲಿಲ್ಲ! ತಮ್ಮ ಇರುವಿಕೆಯನ್ನು ಪ್ರಕಟಪಡಿಸಲು ನಾನು ಜೀಸಸ್ ಕ್ರೈಸ್ಟ್‌ರನ್ನು ಪ್ರಾರ್ಥಿಸಿದೆ. ಆಗ ನಮ್ಮ ಎದುರಿಗಿದ್ದ ಅವರ ಸಣ್ಣ ಮೂರ್ತಿಯಿಂದ ಬೆಳಕು ಹೊರಹೊಮ್ಮುತ್ತಿದ್ದುದು ಸ್ಪಷ್ಟವಾಗಿ ಕಾಣಿಸಿತು! ನಂತರ, ಆ ಮೂರ್ತಿಯ ಬಳಿ ನನ್ನ ಪತಿ ಹಾಗೂ ಸೋದರಿಯ ಮಗಳೊಂದಿಗೆ ಹೋದಾಗ, ಪುನಃ ಆ ಬೆಳಕು ಅದೇ ಮೂರ್ತಿಯಿಂದ ಹೊರಹೊಮ್ಮುತ್ತಿದ್ದುದನ್ನು ನಾವು ಕಂಡೆವು.

– ಪ್ರಿಯಾಂಕಾ ಮಿಶ್ರ

ಇತ್ತೀಚೆಗೆ ನನ್ನೊಳಗೆ ನಿಶ್ಚಲತೆಯ ಅನುಭವವಾಗುತ್ತದೆ. ನನ್ನ ಅರಿವು ವಿಸ್ತರಿಸಿರುವುದು ಕೂಡಾ ಗಮನಕ್ಕೆ ಬರುತ್ತದೆ. ಈ ಹಿಂದೆ ನನಗೆ ಸರಿಯಾಗಿ ವಿವರಿಸಲಾಗದಿದ್ದ ವಿಷಯ ಹಾಗೂ ಭಾವನೆಗಳನ್ನು ಈಗ ಸುಲಭವಾಗಿ ಹಾಗೂ ಉಪಯುಕ್ತವಾಗಿ ವಿವರಿಸಲು ಸಾಧ್ಯವಾಗುತ್ತಿದೆ.

– ಸ್ವಪ್ನಿಲ್ ಪವಾರ್

ಇತ್ತೀಚೆಗೆ ನನ್ನ ಸಂಜೆಯ ಧ್ಯಾನದಲ್ಲಿ, ಅಂತರ್ ಮಾನಸವನ್ನು ಸೂಕ್ಷ್ಮ ಶರೀರದಲ್ಲಿ ಭೇಟಿಮಾಡಿದೆ. ಎಂದಿನಂತೆ ಮಹರ್ಷಿ ವಿಶ್ವಾಮಿತ್ರರ ವಿಗ್ರಹದ ಮುಂದೆ ಕುಳಿತು ಅವರಿಗೆ ಗೌರವಾರ್ಪಣೆ ಮಾಡಿದೆ. ನಾನು ಬೆಳಕಿನ ಮಹಾಸಾಗರವನ್ನು ಅನುಭವಿಸುವ ತಂತ್ರವನ್ನು ಮಾಡಲಾರಂಭಿಸಿದಾಗ, ಮಾಸ್ಟರ್ 'ವಿ' ಯವರಿಂದ ಒಂದು ದೊಡ್ಡ ಬೆಳಕು ಹೊರಹೊಮ್ಮಿ ನನ್ನನ್ನು ಬಂದು ಸೇರಿತು. ನಾನು ಅದೇ ಅನುಭವದಲ್ಲಿ ಸುಮಾರು 20 ನಿಮಿಷಗಳನ್ನು ಕಳೆದೆ. ಮೊಟ್ಟಮೊದಲ ಬಾರಿಗೆ ಆದ ಆ ಅನುಭವದಿಂದಾಗಿ ನಾನು ಅತ್ಯಂತ ಸಂತೋಷಗೊಂಡೆ.

– ರಮೇಶ್ ಕೃಷ್ಣಮೂರ್ತಿ

ಕಳೆದ ಕೆಲವು ತಿಂಗಳುಗಳಿಂದ, ನಾನು ಧ್ಯಾನದಿಂದ ಸಂಗ್ರಹಿಸಿದ ಬಲವನ್ನು ನನ್ನ ಜೀವನದ ಅನೇಕ ಚಟುವಟಿಕೆಗಳಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗಿದೆ. ಈ ಮೊದಲು ಅದರ ಅನುಭವ ಹೃದಯದೊಳಗೆ ಮಾತ್ರ ಇರುತ್ತಿತ್ತು. ಗುರೂಜಿ, ಬೆಳಕು ಮತ್ತು ಭಗವಂತ ಯಾವಾಗಲೂ ನನ್ನೊಂದಿಗೆ ಇರುವಂತೆನಿಸುತ್ತದೆ. ಈ ಮೊದಲು ಭಗವಂತನ ಅನುಗ್ರಹ ಪಡೆಯಲು ಬೇಕಾದ ಅರ್ಹತೆ ನನ್ನಲ್ಲಿ ಸಾಕಷ್ಟಿಲ್ಲ ಎಂದು ನನಗನಿಸುತ್ತಿತ್ತು. ಆದರೆ ಈಗ ಭಗವಂತನನ್ನು ನಾನು ಹಿಡಿಯಬೇಕಾಗಿಲ್ಲ, ಏಕೆಂದರೆ ನಾನೇ ಈಗ ಭಗವಂತನ ಹಿಡಿತದಲ್ಲಿದ್ದೇನೆ! ಇದು ನನಗೆ ನಂಬಲಾರದಂತಹ ರಕ್ಷಣೆ ಹಾಗೂ ಭರವಸೆ ನೀಡಿದೆ.

– ಲಿನ್ ಕರತಾನಿ

ಅಂತರ್ ಮಾನಸದಲ್ಲಿ ಮಹರ್ಷಿ ವಿಶ್ವಾಮಿತ್ರರ ಎದುರು ಕುಳಿತಿದ್ದಾಗ, ಬಿಳಿಯ ಬಣ್ಣದ ಬೆಳಕಿನ ಕ್ರಿಸ್ತರ ಆಕೃತಿಯನ್ನು ಕಂಡೆ. ಹಾಗೂ ಕ್ರಿಸ್ತರು ನನ್ನ ತಲೆಯ ಮೇಲೆ ತಮ್ಮ ಹಸ್ತವನ್ನಿಟ್ಟ ಅನುಭವವಾಯಿತು!

ಪ್ರತಿ ರಾತ್ರಿ ಬೆಳಕಿನ ಸಂಚಲನ ಮಾಡಿ ನಿದ್ರಿಸುವಾಗ ನಾನು ಬೇರೆ ಯಾವುದೋ ಲೋಕದಲ್ಲಿ ಇರುವಂತೆ, ಅಲ್ಲಿನ ಜನರೊಡನೆ ಏನನ್ನೋ ಮಾಡುತ್ತಿರುವಂತೆ ಅನಿಸುತ್ತದೆ. ಆದರೆ ಮಾರನೆಯ ದಿನ ಎದ್ದ ನಂತರ ನನಗೆ ಯಾವುದೂ ನೆನಪಿರುವುದಿಲ್ಲ.

– ವಿನಮ್ರ ಲೊಂಗಾನಿ

ಜನರಲ್ಲಿ ಬದಲಾವಣೆ ಹಾಗೂ ಪರಿವರ್ತನೆ ಕಂಡು ಬರುತ್ತಿದೆ. ಗುರೂಜಿಯವರ ಅನುಗ್ರಹದಿಂದ ಎಲ್ಲವೂ ಶಾಂತವಾಗಿ ನಡೆಯುತ್ತಿದೆ. ನಾನು ಬೆಳಕಿನೊಂದಿಗೆ ಸಂಪರ್ಕದಲ್ಲಿರುವುದರಿಂದ ಎಂತಹ ಪ್ರಕ್ಷುಬ್ಧ ಸನ್ನಿವೇಶದಲ್ಲೂ ಪ್ರಶಾಂತವಾಗಿದ್ದುಕೊಂಡು ಅದನ್ನು ಸುಲಭವಾಗಿ ದಾಟುವುದನ್ನು ಕಲಿತಿದ್ದೇನೆ.

– ಗೀತಾ ಜೋಶಿ

ನಾನು ಯಾವಾಗಲೂ ಬೆಳಕಿಗೆ ಸಂಪರ್ಕಗೊಳ್ಳುವುದರಿಂದ ಅದರ ಸಹಾಯ ಯಾವಾಗಲೂ ನನಗಿರುತ್ತದೆ. ಒಂದು ಸಲ ವಿಮಾನದಲ್ಲಿ ಪ್ರಯಾಣಿಸಬೇಕಾಗಿದ್ದಾಗಿ, ಹವಾಮಾನ ವೈಪರೀತ್ಯದಿಂದಾಗಿ ಪ್ರಯಾಣ ರದ್ದಾಯಿತು. ತಕ್ಷಣ ನಾನು ಬೆಳಕಿಗೆ ಸಹಾಯ ಮಾಡಲು ಪ್ರಾರ್ಥಿಸಿದಾಗ ಹೆಚ್ಚಿನ ತೊಂದರೆಯಿಲ್ಲದೆ ಪರ್ಯಾಯ ವ್ಯವಸ್ಥೆಯಾಯಿತು. ಇಂತಹ ಅನೇಕ ಅನುಭವಗಳು ನನಗಾಗಿವೆ.

– ಆ್ಯನ್ ಚಾಪ್‌ಮನ್

ಗುರೂಜಿಯವರನ್ನು ನಾನು ಭೇಟಿಯಾದ ಕ್ಷಣದಿಂದ, ಅವರು ನನ್ನ ತಂದೆತಾಯಿಯ ಸ್ಥಾನವನ್ನು ತೆಗೆದುಕೊಂಡಿದ್ದಾರೆ. ನನಗೇನಾದರೂ ತೊಂದರೆಯಾದರೆ ಆನೇಕಲ್‌ನಲ್ಲಿರುವ ಅವರ ಸಮಾಧಿಯೆದುರು ಎಲ್ಲವನ್ನೂ ಹೇಳಿಕೊಳ್ಳುತ್ತೇನೆ. ತಕ್ಷಣ ನನಗೆ ಅವರ ಸಹಾಯ ಸಿಗುತ್ತದೆ. ಇತ್ತೀಚೆಗೆ, ನಾನು ನಡೆಸುತ್ತಿರುವ ಅಂಗವಿಕಲರ ಶಾಲೆಯ ಶಿಕ್ಷಕರಿಗೆ ಸಂಬಳ ವಿತರಿಸಲು ನನ್ನಲ್ಲಿ ಹಣ ಇಲ್ಲದಿದ್ದಾಗ, ನಾನು ಗುರೂಜಿಯವರ ಮುಂದೆ ಕಂಬನಿ ಸುರಿಸುತ್ತಾ ಸಹಾಯಕ್ಕಾಗಿ ಪ್ರಾರ್ಥಿಸಿದೆ. ಒಂದೇ ದಿನದಲ್ಲಿ, ಅವರಿಗೆ ಸಂಬಳ ವಿತರಿಸಲು ಎಷ್ಟು ಹಣ ಬೇಕಾಗಿತ್ತೋ ಸರಿಯಾಗಿ ಅಷ್ಟೇ ಹಣ ದೊರಕಿತು!

– ಶ್ರೀಲತಾಂಗಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ